Teachingninja.in

Latest Govt Job updates

Private Job updates

Free Mock tests available

Visit - teachingninja.in

Teachingninja.in

# KHC
# Civil Judge

## Previous Year Paper
### (Prelims)
### 17 Jul, 2022

Teachingninja.in

A

# PRELIMINARY EXAMINATION FOR THE POST OF CIVIL JUDGES - 2022

## ದಿವಾಣಿ ನ್ಯಾಯಾಧೀಶರ ಹುದ್ದೆಗೆ ಪೂರ್ವಭಾವಿ ಪರೀಕ್ಷೆ – 2022

Time: 3.00 PM to 4.30 PM — Marks – 100

ಸಮಯ: ಮಧ್ಯಾಹ್ನ 3.00 ರಿಂದ ಸಂಜೆ 4.30 ಗಂಟೆ — ಅಂಕಗಳು – 100

Date: 17th July 2022

ದಿನಾಂಕ: 17ನೇ ಜುಲೈ 2022

**Note:**

***If there is any discrepancy/difference in the questions in English language and Kannada language, the questions framed in English language shall prevail.***

*ಒಂದು ವೇಳೆ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆಯಲ್ಲಿರುವ ಪ್ರಶ್ನೆಗಳ ನಡುವೆ ಲೋಪ/ವ್ಯತ್ಯಾಸ ಕಂಡುಬಂದಲ್ಲಿ ಆಂಗ್ಲ ಭಾಷೆಯಲ್ಲಿ ಮುದ್ರಿತವಾಗಿರುವ ಪ್ರಶ್ನೆಯು ನಿರ್ಣಾಯಕವಾಗುತ್ತದೆ*

********

1 The contestants for the Post of President of India, for which election will be held tomorrow i.e. on 18.07.2022, are ______

A) Smt. Droupadi Murmu and Sri Jeswanth Singh.
B) Smt. Droupadi Murmu and Sri Yashwant Sinha.
C) Sri Ramnath Kovind and Smt. Meira Kumar
D) Sri Sharad Pawar and Sri Venkaiah Naidu

ನಾಳೆ ಅಂದರೆ ದಿನಾಂಕ 18.07.2022ರಂದು ನಡೆಯುವ ಚುನಾವಣೆಯಲ್ಲಿ ಭಾರತದ ರಾಷ್ಟ್ರಪತಿ ಪದಕ್ಕೆ ಸ್ಪರ್ಧಿಸುವವರು _____

ಎ) ಶ್ರೀಮತಿ ದ್ರೌಪದಿ ಮುರ್ಮು ಮತ್ತು ಶ್ರೀ ಜಸ್ವಂತ್ ಸಿಂಗ್
ಬಿ) ಶ್ರೀಮತಿ ದ್ರೌಪದಿ ಮುರ್ಮು ಮತ್ತು ಶ್ರೀ ಯಶವಂತ ಸಿನಃ
ಸಿ) ಶ್ರೀ ರಾಮ್‌ನಾಥ್ ಕೋವಿಂದ್ ಮತ್ತು ಶ್ರೀಮತಿ ಮೀರ ಕುಮಾರ್
ಡಿ) ಶ್ರೀ ಶರದ್ ಪವಾರ್ ಮತ್ತು ಶ್ರೀ ವೆಂಕಯ್ಯ ನಾಯ್ಡು

2 An application to set aside the abatement of the suit has to be filed under ___________ of the Code of Civil Procedure, 1908.

A) Order 22 Rule 3
B) Order 22 Rule 4
C) Order 22 Rule 10
D) Order 22 Rule 9

ದಾವೆಯು ಕೊನೆಗೊಳಿಸಿರುವುದನ್ನು ರದ್ದುಗೊಳಿಸಲು, ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ________ ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಬೇಕು.

ಎ) ಕ್ರಮಾದೇಶ 22 ನಿಯಮ 3
ಬಿ) ಕ್ರಮಾದೇಶ 22 ನಿಯಮ 4
ಸಿ) ಕ್ರಮಾದೇಶ 22 ನಿಯಮ 10
ಡಿ) ಕ್ರಮಾದೇಶ 22 ನಿಯಮ 9



Teachingninja.in

3 As per the Specific Relief Act, 1963, specific relief can be granted ___________

A) for the purpose of enforcing individual civil rights.
B) for the purpose of enforcing a penal law.
C) Both A) and B).
D) None of the above.

ನಿರ್ದಿಷ್ಟ ಪರಿಹಾರ ಅಧಿನಿಯಮ, 1963ರ ಪ್ರಕಾರ ನಿರ್ದಿಷ್ಟ ಪರಿಹಾರವನ್ನು ________ ಕೊಡಬಹುದು.
ಎ) ವೈಯಕ್ತಿಕ ಸಿವಿಲ್ ಹಕ್ಕುಗಳನ್ನು ಜಾರಿಗೆ ತರುವ ಉದ್ದೇಶಕ್ಕಾಗಿ
ಬಿ) ದಂಡನಾ ಕಾನೂನನ್ನು ಜಾರಿಗೆ ತರುವ ಉದ್ದೇಶಕ್ಕಾಗಿ
ಸಿ) ಎ) ಮತ್ತು ಬಿ) ಎರಡೂ
ಡಿ) ಮೇಲಿನ ಯಾವುದು ಅಲ್ಲ

4 As per Section 2(g) of the Indian Contract Act, 1872, an agreement not enforceable by law is said to be _______

A) void.
B) voidable.
C) valid.
D) invalid.

ಭಾರತೀಯ ಕರಾರು ಅಧಿನಿಯಮ 1872ರ ಕಲಂ 2(ಜಿ) ಪ್ರಕಾರ ಕಾನೂನಿನ ಮೂಲಕ ಜಾರಿಗೊಳಿಸಲಾಗದ ಒಪ್ಪಂದವು ________ ಎಂದು ಕರೆಯಲ್ಪಡುತ್ತದೆ.
ಎ) ಶೂನ್ಯ
ಬಿ) ಶೂನ್ಯಗೊಳಿಸಬಹುದಾಗಿದ್ದು
ಸಿ) ಕ್ರಮಬದ್ಧ
ಡಿ) ಕ್ರಮಬದ್ಧವಲ್ಲದ್ದು

5 Vide Rent Agreement dated 01.02.2019, A let out his house property to B for residential purpose. A issued notice on 01.04.2020 terminating the tenancy of B. B received the said notice on 04.04.2020. Fifteen days time for termination of tenancy starts from ________

A) 01.02.2019
B) 01.04.2020
C) 04.04.2020
D) any of the above.

ದಿನಾಂಕ 01.02.2019ರ ಬಾಡಿಗೆ ಕರಾರಿನ ಮೂಲಕ ಎ ಯು ತನ್ನ ಮನೆಯನ್ನು ಬಿ ಗೆ ವಾಸದ ಉದ್ದೇಶಕ್ಕಾಗಿ ಬಾಡಿಗೆಗೆ ಕೊಡುತ್ತಾನೆ. ಎ ಯು ದಿನಾಂಕ 01.04.2020ರಂದು ನೋಟೀಸು ಕೊಟ್ಟು ಬಿ ಯ ಬಾಡಿಗೆಯನ್ನು ಮುಕ್ತಾಯಗೊಳಿಸುತ್ತಾನೆ. ಆ ನೋಟೀಸನ್ನು ಬಿ ಯು ದಿನಾಂಕ 04.04.2020ರಂದು ಸ್ವೀಕರಿಸುತ್ತಾನೆ. ಬಾಡಿಗೆ ಮುಕ್ತಾಯಗೊಳ್ಳುವ 15 ದಿನಗಳ ಅವಧಿ _______ ರಿಂದ ಪ್ರಾರಂಭವಾಗುತ್ತದೆ.
ಎ) 01.02.2019
ಬಿ) 01.04.2020
ಸಿ) 04.04.2020
ಡಿ) ಮೇಲಿನ ಯಾವುದಾದರು



Teachingninja.in

6 A contract to do or not to do something, if some event, collateral to such contract, does or does not happen, is called as _______
A) collateral contract.
B) contingent contract.
C) invalid contract
D) none of the above

ಒಂದು ಕರಾರಿಗೆ ಜೊತೆಜೊತೆಯಾಗಿ ಸಂಬಂಧಿಸಿದಂತೆ ಒಂದು ಘಟನೆ ನಡೆದರೆ ಅಥವಾ ನಡೆಯದಿದ್ದರೆ ಯಾವುದನ್ನಾದರು ಮಾಡಲು ಅಥವಾ ಮಾಡದಿರಲು ಮಾಡಿಕೊಂಡಂತಹ ಕರಾರನ್ನು __________ ಎಂದು ಕರೆಯುತ್ತಾರೆ.
ಎ) ಜೊತೆಜೊತೆಯಾದ ಕರಾರು
ಬಿ) ಅವಲಂಬಿತ ಕರಾರು
ಸಿ) ಕ್ರಮಬದ್ಧವಲ್ಲದ ಕರಾರು
ಡಿ) ಮೇಲಿನ ಯಾವುದೂ ಅಲ್ಲ

7 The Magistrate, after finding the accused guilty, is of the opinion that accused ought to receive more severe punishment, than a Magistrate is empowered to inflict, he shall submit the proceedings to the __________ to whom he is subordinate.
A) Chief Judicial Magistrate.
B) Principle District and Sessions Judge.
C) Additional District and Sessions Judge.
D) Any one of the above.

ದಂಡಾಧಿಕಾರಿಯು ಆರೋಪಿಯು ತಪ್ಪಿತಸ್ಥನೆಂದು ಕಂಡು ಬಂದ ಬಳಿಕ ತಾನು ವಿಧಿಸಲು ಅಧಿಕಾರ ಉಳ್ಳವನಾಗಿರುವುದಕ್ಕಿಂತ ಹೆಚ್ಚು ಕಠಿಣವಾದ ಶಿಕ್ಷೆಯನ್ನು ಅವನಿಗೆ ಕೊಡತಕ್ಕದ್ದು ಎಂದು ಅಭಿಪ್ರಾಯ ಪಟ್ಟಾಗ, ಆ ದಂಡಾಧಿಕಾರಿಯವರು ಕಲಾಪಗಳನ್ನು ತಾನು ಯಾರಿಗೆ ಅಧೀನನೊ ಆ __________ ಒಪ್ಪಿಸತಕ್ಕದ್ದು.
ಎ) ಮುಖ್ಯ ನ್ಯಾಯಾಂಗ ದಂಡಾಧಿಕಾರಿಯವರಿಗೆ
ಬಿ) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಿಗೆ
ಸಿ) ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಿಗೆ
ಡಿ) ಮೇಲಿನ ಪೈಕಿ ಯಾರಾದರೊಬ್ಬರಿಗೆ

8 Who among the following has become the President of India, without becoming the Vice President of India?
A) Sri R Venkataraman.
B) Sri Shankara Dayal Sharma.
C) Sri K.R.Narayanan.
D) Sri A.P.J.Abdul Kalam

ಈ ಕೆಳಗಿನವರ ಪೈಕಿ ಯಾರು ಭಾರತದ ಉಪರಾಷ್ಟ್ರಪತಿಯಾಗದೆ ಭಾರತದ ರಾಷ್ಟ್ರಪತಿ ಆಗಿದ್ದರು?
ಎ) ಶ್ರೀ ಆರ್ ವೆಂಕಟರಮಣ್
ಬಿ) ಶ್ರೀ ಶಂಕರ ದಯಾಲ್ ಶರ್ಮ
ಸಿ) ಶ್ರೀ ಕೆ.ಆರ್.ನಾರಾಯಣನ್
ಡಿ) ಶ್ರೀ ಎ.ಪಿ.ಜೆ ಅಬ್ದುಲ್ ಕಲಾಂ



Teachingninja.in

9 What must be the age of a minor/victim with regard to the offence of kidnapping as defined under Section 361 of the Indian Penal Code?
A) sixteen years.
B) Eighteen years.
C) under sixteen years, if a male and under eighteen years, if a female.
D) under eighteen years, if a male and under twenty one years, if a female.

ಭಾರತೀಯ ದಂಡ ಸಂಹಿತೆಯ ಕಲಂ 361ರ ಅಡಿಯಲ್ಲಿ ವ್ಯಾಖ್ಯಾನಿಸಿರುವ ವ್ಯವಹರಣ ಆರೋಪಕ್ಕೆ ಸಂಬಂಧಿಸಿದ ಅಪ್ರಾಪ್ತ/ನೊಂದ ವ್ಯಕ್ತಿಯ ವಯಸ್ಸು ಎಷ್ಟು ಆಗಿರಬೇಕು?
ಎ) ಹದಿನಾರು ವರ್ಷ
ಬಿ) ಹದಿನೆಂಟು ವರ್ಷ
ಸಿ) ಪುರುಷನಾಗಿದಲ್ಲಿ ಹದಿನಾರು ವರ್ಷ ವಯಸ್ಸಿನೊಳಗೆ ಮತ್ತು ಮಹಿಳೆಯಾಗಿದಲ್ಲಿ ಹದಿನೆಂಟು ವರ್ಷ ವಯಸ್ಸಿನೊಳಗೆ
ಡಿ) ಪುರುಷನಾಗಿದಲ್ಲಿ ಹದಿನೆಂಟು ವರ್ಷ ವಯಸ್ಸಿನೊಳಗೆ ಮತ್ತು ಮಹಿಳೆಯಾಗಿದಲ್ಲಿ ಇಪ್ಪತ್ತೊಂದು ವರ್ಷ ವಯಸ್ಸಿನೊಳಗೆ

10 President of India shall be elected by the ________
A) elected members of Lok sabha
B) elected members of both houses of Parliament
C) elected members of both houses of Parliament and Legislative Assemblies of the States
D) elected members of both house of Parliament, Legislative Assemblies and Legislative Councils of the States

ಭಾರತದ ರಾಷ್ಟ್ರಪತಿಗಳನ್ನು ಚುನಾಯಿಸುವವರು ____________
ಎ) ಲೋಕಸಭೆಯ ಚುನಾಯಿತ ಸದಸ್ಯರು
ಬಿ) ಸಂಸತ್ತಿನ ಎರಡು ಸದನದ ಚುನಾಯಿತ ಸದಸ್ಯರು
ಸಿ) ಸಂಸತ್ತಿನ ಎರಡು ಸದನದ ಮತ್ತು ರಾಜ್ಯಗಳ ವಿಧಾನಸಭೆಗಳ ಚುನಾಯಿತ ಸದಸ್ಯರು
ಡಿ) ಸಂಸತ್ತಿನ ಎರಡು ಸದನದ, ರಾಜ್ಯಗಳ ವಿಧಾನಸಭೆಗಳ ಮತ್ತು ವಿಧಾನಪರಿಷತ್ತುಗಳ ಚುನಾಯಿತ ಸದಸ್ಯರು

11 The Constitution of India was adopted by the Constituent Assembly on:
A) 26th January 1950
B) 26th November 1949
C) 15th August 1947
D) none of the above

ಭಾರತದ ಸಂವಿಧಾನವನ್ನು ಸಂವಿಧಾನ ಸಭೆಯು ________ ರಂದು ಅಂಗೀಕರಿಸಿತ್ತು
ಎ) 26ನೇ ಜನವರಿ 1950
ಬಿ) 26ನೇ ನವೆಂಬರ್ 1949
ಸಿ) 15ನೇ ಆಗಸ್ಟ್ 1947
ಡಿ) ಮೇಲಿನ ಯಾವುದು ಅಲ್ಲ



Teachingninja.in

12 Which one of the following is correct as per the Code of Civil Procedure Code, 1908?

A) Order 1 Rule 8 – Adding or striking out parties.
B) Order 22 Rule 3- making legal representative of deceased plaintiff as a party to the suit.
C) Order 22 Rule 5 – making legal representative of deceased defendant as a party to the suit.
D) Order 23 Rule 3 – withdrawal of the suit with liberty to file fresh suit.

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಪ್ರಕಾರ ಈ ಕೆಳಗಿನವುಗಳ ಪೈಕಿ ಯಾವುದು ಒಂದು ಸರಿ?

ಎ) ಕ್ರಮಾದೇಶ 1 ನಿಯಮ 8 – ಪಕ್ಷಗಾರರನ್ನು ಸೇರಿಸುವುದು ಅಥವಾ ತೆಗೆದು ಹಾಕುವುದು.
ಬಿ) ಕ್ರಮಾದೇಶ 22 ನಿಯಮ 3 – ಮೃತ ವಾದಿಯ ಕಾನೂನುಬದ್ಧ ಪ್ರತಿನಿದಿಯನ್ನು ದಾವೆಗೆ ಪಕ್ಷಗಾರನನ್ನಾಗಿ ಸೇರಿಸುವುದು.
ಸಿ) ಕ್ರಮಾದೇಶ 22 ನಿಯಮ 5 – ಮೃತ ಪ್ರತಿವಾದಿಯ ಕಾನೂನುಬದ್ಧ ಪ್ರತಿನಿದಿಯನ್ನು ದಾವೆಗೆ ಪಕ್ಷಗಾರನನ್ನಾಗಿ ಸೇರಿಸುವುದು.
ಡಿ) ಕ್ರಮಾದೇಶ 23 ನಿಯಮ 3 – ಹೊಸ ದಾವೆ ಹೂಡುವ ಸ್ವಾತಂತ್ರ್ಯದೊಂದಿಗೆ ದಾವೆಯನ್ನು ಹಿಂಪಡೆಯುವುದು.

13 As per Section 137 of the Indian Evidence Act, 1872, examination of a witness, subsequent to the cross-examination, by the party who called him, is called as his ___________
A) re-examination.
B) further examination-in-chief.
C) further cross-examination.
D) none of the above

ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಕಲಂ 137ರ ಪ್ರಕಾರ ಪಾಟೀ ಸವಾಲು ಆದ ತರುವಾಯ ಪಕ್ಷಗಾರನು ತಾನು ಕರೆಯಿಸಿದ ಸಾಕ್ಷಿಯನ್ನು ವಿಚಾರಣೆ ಮಾಡುವುದನ್ನು ___________ ಎಂದು ಕರೆಯುತ್ತಾರೆ.
ಎ) ಮರು ವಿಚಾರಣೆ
ಬಿ) ಮುಂದುವರಿದ ಮುಖ್ಯ ವಿಚಾರಣೆ
ಸಿ) ಮುಂದುವರಿದ ಪಾಟೀ ಸವಾಲು
ಡಿ) ಮೇಲಿನ ಯಾವೂದು ಅಲ್ಲ

14 If any one of the five or more persons, who are conjointly committing dacoity, commits murder in so committing dacoity, every one of those persons committed offence punishable under _________of Indian Penal code.
A) Section 396
B) Section 395
C) Section 302
D) Section 302 and 395



Teachingninja.in

ಐದು ಅಥವಾ ಅದಕ್ಕಿಂತ ಹೆಚ್ಚು ವ್ಯಕ್ತಿಗಳು ಒಂದಾಗಿ ದರೋಡೆಯನ್ನು ಮಾಡುವ ಸಂದರ್ಭದಲ್ಲಿ ಅವರ ಪೈಕಿ ಯಾವನೇ ಒಬ್ಬ ಅಂತಹ ದರೋಡೆಯ ನಡುವೆ ಕೊಲೆಯನ್ನು ಮಾಡಿದ ಪಕ್ಷದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಭಾರತೀಯ ದಂಡ ಸಂಹಿತೆಯ __________ ಅಡಿಯಲ್ಲಿ ಶಿಕ್ಷಾರ್ಹವಾಗಿರುವ ಅಪರಾಧ ಮಾಡಿದಂತಾಗುತ್ತದೆ.
ಎ) ಕಲಂ 396
ಬಿ) ಕಲಂ 395
ಸಿ) ಕಲಂ 302
ಡಿ) ಕಲಂ 302 ಮತ್ತು 395

15 The Code of Civil Procedure, 1908 provides for granting of ________
A) temporary injunction
B) perpetual injunction
C) mandatory injunction
D) All the above

ದಿವಾಣಿ ಪ್ರಕ್ರಿಯಾ ಸಂಹಿತೆ, 1908 __________ ನೀಡುವುದಕ್ಕೆ ಅವಕಾಶ ನೀಡುತ್ತದೆ.
ಎ) ತಾತ್ಕಾಲಿಕ ನಿರ್ಬಂದಕಾಜ್ಞೆ
ಬಿ) ಶಾಶ್ವತ ನಿರ್ಬಂದಕಾಜ್ಞೆ
ಸಿ) ಆಜ್ಞಾಪಕ ನಿರ್ಬಂದಕಾಜ್ಞೆ
ಡಿ) ಮೇಲಿನ ಎಲ್ಲವೂ

16 A leading decision of the Supreme Court of India on Section 65B of the Indian Evidence Act, 1872 (admissibility of Electronic evidence) is:

A) Arjun Panditrao Khotkar vs Kailash Kushanrao Gorantyal and others.
B) Gurubaksh Singh Sibbia and others vs State of Punjab.
C) Lalitha Kumari Vs. Government of Uttar Pradesh and others
D) Arnesh Kumar Vs. State of Bihar

ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಕಲಂ 65ಬಿ (ವಿದ್ಯುನ್ಮಾನ ಸಾಕ್ಷ್ಯಗಳ ಸ್ವೀಕಾರಾರ್ಹತೆ) ಬಗ್ಗೆ ಭಾರತದ ಸರ್ವೋಚ್ಚ ನ್ಯಾಯಾಲಯದ ಪ್ರಮುಖವಾದ ತೀರ್ಪು:

ಎ) ಅರ್ಜುನ್ ಪಂಡಿತ್‌ರಾವ್ ಕೋಟ್ಕರ್ ವಿರುದ್ಧ ಕೈಲಾಶ್ ಕುಶನ್‌ರಾವ್ ಗೋರಂಟೈಲ್ ಮತ್ತು ಇತರರು
ಬಿ) ಗುರುಭಕ್ಷ್ ಸಿಂಗ್ ಸಿಬ್ಬಿಯ ಮತ್ತು ಇತರರು ವಿರುದ್ಧ ಪಂಜಾಬ್ ರಾಜ್ಯ
ಸಿ) ಲಲಿತ ಕುಮಾರಿ ವಿರುದ್ಧ ಉತ್ತರ ಪ್ರದೇಶ ಸರ್ಕಾರ ಮತ್ತು ಇತರರು
ಡಿ) ಅರ್ನೇಶ್ ಕುಮಾರ್ ವಿರುದ್ಧ ಬಿಹಾರ ರಾಜ್ಯ

17 "Voyeurism" an offence punishable under Section 354C of Indian Penal Code, means:

A) Monitoring the use by a woman of the internet, email or any other form of electronic communications.
B) A man watching or capturing the image of a woman engaged in a private act
C) Following a woman and contacting such woman to foster personal interaction repeatedly.
D) Making sexually colored remarks.



Teachingninja.in

ಭಾರತೀಯ ದಂಡ ಸಂಹಿತೆಯ ಕಲಂ 354ಸಿ ಅಡಿಯಲ್ಲಿ ಶಿಕ್ಷಾರ್ಹವಾಗಿರುವ ಅಪರಾಧ "ವಾಯರಿಸಮ್" ಎಂದರೆ:
ಎ) ಇಂಟರ್‌ನೆಟ್, ಇ–ಮೇಲ್ ಅಥವಾ ಇತರ ಯಾವುದೇ ರೂಪದ ವಿದ್ಯುನ್ಮಾನ ಸಂವಹನಗಳನ್ನು ಓರ್ವ ಮಹಿಳೆಯು ಉಪಯೋಗಿಸುತ್ತಿರುವುದನ್ನು ಗಮನಿಸುವುದು.
ಬಿ) ಓರ್ವ ಮಹಿಳೆಯು ಖಾಸಗಿ ಕೃತ್ಯದಲ್ಲಿ ಒಳಗೊಂಡಿರುವುದನ್ನು ಓರ್ವ ಪುರುಷ ನೋಡುವುದು ಮತ್ತು ಅದನ್ನು ಚಿತ್ರಿಸುವುದು.
ಸಿ) ಓರ್ವ ಮಹಿಳೆಯನ್ನು ಹಿಂಬಾಲಿಸುವುದು ಮತ್ತು ಆ ಮಹಿಳೆಯೊಂದಿಗೆ ವ್ಯಯಕ್ತಿಕ ಸಂವಹನವನ್ನು ಬೆಳೆಸಲು ಸತತವಾಗಿ ಸಂಪರ್ಕಿಸುವುದು.
ಡಿ) ಲೈಂಗಿಕ ರೂಪದಲ್ಲಿ ಟೀಕಿಸುವುದು.

18 When a decree is passed against the Government, execution shall not be issued on such decree against the Government unless it remains unsatisfied for the period of __________ computed from the date of such decree.
A) two years.
B) one year.
C) six months.
D) three months.

ಸರ್ಕಾರದ ವಿರುದ್ಧ ಡಿಕ್ರಿಯನ್ನು ಮಾಡಿದಾಗ ಅಂತಹ ಯಾವುದೇ ಡಿಕ್ರಿಯನ್ನು ಆ ಡಿಕ್ರಿಯ ದಿನಾಂಕದಿಂದ ಲೆಕ್ಕ ಹಾಕಲಾದ __________ ಅವಧಿಯವರೆಗೆ ಅದು ಸಮಾಧಾನವಾಗದೆ ಉಳಿದಿದ್ದ ಹೊರತು, ಅಮಲ್ಜಾರಿ ಮಾಡತಕ್ಕುದಲ್ಲ.
ಎ) ಎರಡು ವರ್ಷದ
ಬಿ) ಒಂದು ವರ್ಷದ
ಸಿ) ಆರು ತಿಂಗಳ
ಡಿ) ಮೂರು ತಿಂಗಳ

19 When the Court permit the plaintiff to institute the suit against the Government without serving notice under Section 80(1) of the Code of Civil Procedure 1908,__________

A) Court can grant interim relief against the Government without giving opportunity of showing cause.
B) Court shall not grant any interim relief against the Government without giving opportunity of showing cause.
C) it is the discretion of the Court to grant any interim relief or not.
D) Court can pass an exparte order of status quo against the Government.

ನ್ಯಾಯಾಲಯವು ವಾದಿಗೆ ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕಲಂ 80(1)ರ ಅಡಿಯಲ್ಲಿ ನೋಟೀಸನ್ನು ಜಾರಿಗೊಳಿಸದೆ ಸರ್ಕಾರದ ವಿರುದ್ಧ ದಾವೆಯನ್ನು ಸಲ್ಲಿಸಲು ಪರವಾನಿಗೆ ಕೊಟ್ಟಾಗ __________
ಎ) ಕಾರಣವನ್ನು ತೋರಿಸಲು ಯುಕ್ತವಾದ ಅವಕಾಶವನ್ನು ಕೊಡದೆಯೆ ನ್ಯಾಯಾಲಯವು ಸರ್ಕಾರದ ವಿರುದ್ಧ ಮಧ್ಯಂತರ ಆದೇಶವನ್ನು ಮಾಡಬಹುದು.
ಬಿ) ಕಾರಣವನ್ನು ತೋರಿಸಲು ಯುಕ್ತವಾದ ಅವಕಾಶವನ್ನು ಕೊಡದೆ ನ್ಯಾಯಾಲಯವು ಸರ್ಕಾರದ ವಿರುದ್ಧ ಯಾವುದೇ ಮಧ್ಯಂತರ ಆದೇಶವನ್ನು ಮಾಡಲಾಗುವುದಿಲ್ಲ.



Teachingninja.in

ಸಿ) ಯಾವುದೇ ಮಧ್ಯಂತರ ಆದೇಶವನ್ನು ನೀಡುವುದು ಅಥವಾ ನೀಡದೇ ಇರುವುದು ನ್ಯಾಯಾಲಯದ ವಿವೇಚನೆಗೆ ಒಳಪಟ್ಟಿದ್ದು.
ಡಿ) ನ್ಯಾಯಾಲಯವು ಸರ್ಕಾರದ ವಿರುದ್ಧ ಯತಾಸ್ಥಿತಿ ಕಾಪಾಡುವ ಬಗ್ಗೆ ಏಕಪಕ್ಷೀಯ ಆದೇಶ ಮಾಡಬಹುದು.

20 The words "Satyameva Jayate" in the Indian National Emblem is taken from:
A) Ramayana.
B) Samaveda.
C) Rigveda.
D) Upanishads.

ಭಾರತದ ರಾಷ್ಟ್ರೀಯ ಲಾಂಛನದಲ್ಲಿರುವ "ಸತ್ಯಮೇವ ಜಯತೇ" ಎಂಬ ಪದಗಳನ್ನು ________ ತೆಗೆದುಕೊಳ್ಳಲಾಗಿದೆ.
ಎ) ರಾಮಾಯಣದಿಂದ
ಬಿ) ಸಾಮವೇದದಿಂದ
ಸಿ) ಋಗ್ವೇದದಿಂದ
ಡಿ) ಉಪನಿಷತ್ತಿನಿಂದ

21 Doing of an act which would bring the Government established by law in India into hatred or contempt is called as ________
A) Conspiracy.
B) Waging war against the Government.
C) Sedition.
D) Abetment.

ಭಾರತದಲ್ಲಿ ಕಾನೂನು ರೀತ್ಯ ಸ್ಥಾಪನೆಗೊಂಡ ಸರ್ಕಾರವನ್ನು ದ್ವೇಷಿಸುವ ಅಥವಾ ನಿಂದನೆ ಹುಟ್ಟು ಹಾಕುವ ಕೃತ್ಯವನ್ನು ________ ಎನ್ನುತ್ತಾರೆ.
ಎ) ಒಳಸಂಚು
ಬಿ) ಸರ್ಕಾರದ ವಿರುದ್ಧ ಯುದ್ಧ ಸಾರುವುದು
ಸಿ) ರಾಜದ್ರೋಹ
ಡಿ) ಪ್ರಚೋದನೆ

22 Section 215 of the Code of Criminal Procedure, 1973 deals with the following subject:
A) Contents of charge
B) Effect of errors in charge
C) alteration of charge
D) recall of witness when charge is altered.

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 215 ಈ ಕೆಳಗಿನ ವಿಷಯವನ್ನು ವ್ಯವಹರಿಸುತ್ತದೆ:
ಎ) ದೋಷಾರೋಪಣೆಯ ಒಳಾಂಷಗಳು
ಬಿ) ದೋಷಾರೋಪಣೆಯಲ್ಲಿನ ತಪ್ಪುಗಳ ಪರಿಣಾಮ
ಸಿ) ದೋಷಾರೋಪಣೆಯನ್ನು ಬದಲಾಯಿಸುವುದು
ಡಿ) ದೋಷಾರೋಪಣೆಯನ್ನು ಬದಲಾಯಿಸಿದಾಗ ಸಾಕ್ಷಿಗಳನ್ನು ಪುನಃ ಕರೆಯುವುದು



Teachingninja.in

23 As per Order 14 Rule 5 of the Code of Civil Procedure, 1908, the Court may strike out the wrongly framed issues _______
A) at any time before commencement of trial.
B) at any time before conclusion of trial.
C) at any time before pronouncing the judgment.
D) at any time before passing the decree.

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 14 ನಿಯಮ 5ರ ಪ್ರಕಾರ ನ್ಯಾಯಾಲಯವು ತಪ್ಪಾಗಿ ರೂಪಿಸಲಾದ ವಿವಾದಾಂಶಗಳನ್ನು ____________ ಹೊಡೆದು ಹಾಕಬಹುದು.
ಎ) ಅಧಿವಿಚಾರಣೆ ಪ್ರಾರಂಭವಾಗುವ ಮೊದಲು ಯಾವುದೇ ಕಾಲದಲ್ಲಿ.
ಬಿ) ಅಧಿವಿಚಾರಣೆ ಮುಕ್ತಾಯವಾಗುವ ಮೊದಲು ಯಾವುದೇ ಕಾಲದಲ್ಲಿ.
ಸಿ) ತೀರ್ಪನ್ನು ಉದ್ಘೋಷಿಸುವ ಮೊದಲು ಯಾವುದೇ ಕಾಲದಲ್ಲಿ.
ಡಿ) ಡಿಕ್ರಿಯನ್ನು ಮಾಡುವ ಮೊದಲು ಯಾವುದೇ ಕಾಲದಲ್ಲಿ.

24 A let out his immovable property to B for manufacturing purpose. In the lease agreement, both A and B agreed that said lease is terminable by one years' notice. But, as per Section 106 of the Transfer of Property Act, 1882, lease for manufacturing purposes shall be terminable by six months' notice. A can terminate the lease of B by:
A) six months' notice.
B) one years' notice.
C) either A) or B)
D) none of the above.

ಎ ಯು ತನ್ನ ಸ್ಥಿರ ಸ್ವತ್ತನ್ನು ಬಿ ಗೆ ಉತ್ಪಾದನಾ ಉದ್ದೇಶಕ್ಕಾಗಿ ಗೇಣಿಗೆ ಕೊಡುತ್ತಾನೆ. ಗೇಣಿ ಕರಾರಿನಲ್ಲಿ ಎ ಮತ್ತು ಬಿ ಇಬ್ಬರೂ ಕೂಡ ಆ ಗೇಣಿಯನ್ನು ಒಂದು ವರ್ಷದ ಅವಧಿಯ ನೋಟೀಸನ್ನು ಕೊಟ್ಟು ಕೊನೆಗೊಳಿಸಬಹುದು ಎಂದು ಒಪ್ಪಿಕೊಂಡಿರುತ್ತಾರೆ. ಆದರೆ ಸ್ವತ್ತು ವರ್ಗಾವಣೆ ಅಧಿನಿಯಮ 1882ರ ಕಲಂ 106ರ ಪ್ರಕಾರ ಉತ್ಪಾದನಾ ಉದ್ದೇಶಕ್ಕಾಗಿ ಕೊಟ್ಟ ಗೇಣಿಯನ್ನು ಆರು ತಿಂಗಳ ನೋಟೀಸು ಕೊಟ್ಟು ಕೊನೆಗೊಳಿಸತಕ್ಕದ್ದು ಎಂಬುದಾಗಿ ಇದೆ. ಎ ಯು ಬಿ ಯ ಗೇಣಿಯನ್ನು __________ ಮುಕ್ತಾಯಗೊಳಿಸಬಹುದು.
ಎ) ಆರು ತಿಂಗಳ ನೋಟೀಸು
ಬಿ) ಒಂದು ವರ್ಷದ ನೋಟೀಸು
ಸಿ) ಎ) ಅಥವಾ ಬಿ)
ಡಿ) ಮೇಲಿನ ಯಾವುದು ಅಲ್ಲ

25 As per Section 10 of the Indian Penal Code, word "man" denotes:
A) a male human being aged above 16 years.
B) a male human being aged above 18 years.
C) a male human being aged above 21 years.
D) a male human being of any age.

ಭಾರತೀಯ ದಂಡ ಸಂಹಿತೆ ಕಲಂ 10ರ ಪ್ರಕಾರ "ಗಂಡಸು" ಎನ್ನುವ ಪದ ಸೂಚಿಸುವುದು:
ಎ) 16 ವರ್ಷಕ್ಕೂ ಮೇಲ್ಪಟ್ಟ ವಯೋಮಾನದ ಪುರುಷ
ಬಿ) 18 ವರ್ಷಕ್ಕೂ ಮೇಲ್ಪಟ್ಟ ವಯೋಮಾನದ ಪುರುಷ
ಸಿ) 21 ವರ್ಷಕ್ಕೂ ಮೇಲ್ಪಟ್ಟ ವಯೋಮಾನದ ಪುರುಷ
ಡಿ) ಯಾವುದೇ ವಯೋಮಾನದ ಪುರುಷ ವ್ಯಕ್ತಿ



Teachingninja.in

26 A promise made without any intention of performing it; is ________
A) misrepresentation.
B) undue influence.
C) coercion.
D) fraud.

ಒಂದು ವಾಗ್ದಾನವನ್ನು, ಅದನ್ನು ಪೂರೈಸುವ ಯಾವುದೇ ಉದ್ದೇಶ ಇಲ್ಲದೆ ಮಾಡಿದಲ್ಲಿ, ಅದು ____________ ಆಗುತ್ತದೆ.
ಎ) ತಪ್ಪು ನಿರೂಪಣೆ
ಬಿ) ಅನುಚಿತ ಪ್ರಭಾವ
ಸಿ) ಬಲತ್ಕಾರ
ಡಿ) ಮೋಸ

27 Jog Falls, which is one of the highest water falls in India, is created by:
A) Tunga River.
B) Kaveri River.
C) Sharavati River.
D) Bhadra River.

ಭಾರತದ ಅತಿ ಎತ್ತರದ ಜಲಪಾತಗಳಲ್ಲಿ ಒಂದಾದ ಜೋಗ ಜಲಪಾತ ಸೃಷ್ಟಿಯಾಗಿರುವುದು:
ಎ) ತುಂಗಾ ನದಿಯಿಂದ
ಬಿ) ಕಾವೇರಿ ನದಿಯಿಂದ
ಸಿ) ಶರಾವತಿ ನದಿಯಿಂದ
ಡಿ) ಭದ್ರಾ ನದಿಯಿಂದ

28 Withdrawal of the complaint under Section 257 of Code of Criminal Procedure 1973 results in:
A) discharge of the accused
B) acquittal of the accused
C) either A) or B)
D) none of the above

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 257ರ ಅಡಿಯಲ್ಲಿ ಫಿರ್ಯಾದಿಯನ್ನು ವಾಪಸ್ಸು ತೆಗೆದುಕೊಂಡಾಗ ಆಗುವ ಪರಿಣಾಮ:
ಎ) ಆರೋಪಿಯ ಬಿಡುಗಡೆ
ಬಿ) ಆರೋಪಿಯನ್ನು ನಿರಪರಾದಿ ಎಂದು ತೀರ್ಮಾನ
ಸಿ) ಎ) ಅಥವಾ ಬಿ)
ಡಿ) ಮೇಲಿನ ಯಾವುದು ಅಲ್ಲ

29 The Specific Relief Act, 1963 provides for granting of ________
A) temporary injunction.
B) perpetual injunction.
C) mandatory injunction.
D) All the above.



Teachingninja.in

ನಿರ್ದಿಷ್ಟ ಪರಿಹಾರ ಅಧಿನಿಯಮ, 1963 __________ ನೀಡುವುದಕ್ಕೆ ಅವಕಾಶ ನೀಡುತ್ತದೆ.
ಎ) ತಾತ್ಕಾಲಿಕ ನಿರ್ಭಂದಕಾಜ್ಞೆ
ಬಿ) ಶಾಶ್ವತ ನಿರ್ಭಂದಕಾಜ್ಞೆ
ಸಿ) ಆಜ್ಞಾಪಕ ನಿರ್ಭಂದಕಾಜ್ಞೆ
ಡಿ) ಮೇಲಿನ ಎಲ್ಲವೂ

30 A makes an attempt to steal some jewels by breaking open a box, and finds after so opening the box, that there is no jewel in it. A __________
A) not committed any offence.
B) committed an offence punishable under Section 511 of Indian Penal Code.
C) committed an offence punishable under Section 379 of Indian Penal Code.
D) committed an offence punishable under Sections 379 and 511 of the Indian Penal Code.

ಎ ಯು ಆಭರಣಗಳನ್ನು ಕಳವು ಮಾಡುವ ಪ್ರಯತ್ನದ ಉದ್ದೇಶದಿಂದ ಪೆಟ್ಟಿಗೆಯನ್ನು ಒಡೆದು ತೆರೆಯುತ್ತಾನೆ ಮತ್ತು ಹಾಗೆ ಹೊಡೆದು ತೆರೆದ ಪೆಟ್ಟಿಗೆಯಲ್ಲಿ ಆಭರಣಗಳು ಇಲ್ಲದಿರುವುದನ್ನು ತಿಳಿಯುತ್ತಾನೆ. ಎ ________
ಎ) ಯಾವುದೇ ಅಪರಾಧ ಮಾಡಿಲ್ಲ
ಬಿ) ಭಾರತೀಯ ದಂಡ ಸಂಹಿತೆಯ ಕಲಂ 511ರ ಅಡಿಯಲ್ಲಿ ಶಿಕ್ಷಾರ್ಹವಾಗಿರುವ ಅಪರಾಧ ಮಾಡಿರುತ್ತಾನೆ.
ಸಿ) ಭಾರತೀಯ ದಂಡ ಸಂಹಿತೆಯ ಕಲಂ 379ರ ಅಡಿಯಲ್ಲಿ ಶಿಕ್ಷಾರ್ಹವಾಗಿರುವ ಅಪರಾಧ ಮಾಡಿರುತ್ತಾನೆ.
ಡಿ) ಭಾರತೀಯ ದಂಡ ಸಂಹಿತೆಯ ಕಲಂ 379 ಮತ್ತು 511ರ ಅಡಿಯಲ್ಲಿ ಶಿಕ್ಷಾರ್ಹವಾಗಿರುವ ಅಪರಾಧ ಮಾಡಿರುತ್ತಾನೆ.

31 As per Section 152 of the Code of Civil Procedure, 1908, any clerical or arithmetical mistakes in the judgments, decrees or orders can be corrected by the Court _________
A) only on the application of any of the parties.
B) only of its own motion.
C) either A) or B).
D) none of the above.

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕಲಂ 152ರ ಪ್ರಕಾರ ತೀರ್ಪುಗಳಲ್ಲಿ, ಡಿಕ್ರಿಗಳಲ್ಲಿ ಅಥವಾ ಆದೇಶಗಳಲ್ಲಿ ಆಗಿರುವ ಕೈತಪ್ಪುಗಳನ್ನು ಅಥವಾ ಅಂಕಿ ಅಂಶಗಳ ತಪ್ಪುಗಳನ್ನು ನ್ಯಾಯಾಲಯವು __________ ಸರಿಪಡಿಸಬಹುದು.
ಎ) ಯಾವುದೇ ಪಕ್ಷಗಾರರು ಅರ್ಜಿ ಸಲ್ಲಿಸಿದಲ್ಲಿ ಮಾತ್ರ
ಬಿ) ಸ್ವತಃ ತಾನಾಗಿಯೆ ಮಾತ್ರ
ಸಿ) ಎ) ಅಥವಾ ಬಿ)
ಡಿ) ಮೇಲಿನ ಯಾವುದು ಅಲ್ಲ

32 Every suit shall be instituted ____________
A) in the Court of the highest grade competent to try it.
B) in the Court of the lowest grade competent to try it.
C) either A) or B)
D) in the Court of District Judges.



Teachingninja.in

ಪ್ರತಿಯೊಂದು ದಾವೆಯನ್ನು __________ ಹೂಡತಕ್ಕದ್ದು.
ಎ) ಅದನ್ನು ಅಧಿವಿಚಾರಣೆ ಮಾಡಲು ಸಕ್ಷಮವಾಗಿರುವ ಅತ್ಯಂತ ಮೇಲಿನ ಶ್ರೇಣಿಯ ನ್ಯಾಯಾಲಯದಲ್ಲಿ
ಬಿ) ಅದನ್ನು ಅಧಿವಿಚಾರಣೆ ಮಾಡಲು ಸಕ್ಷಮವಾಗಿರುವ ಅತ್ಯಂತ ಕೆಳಗಿನ ಶ್ರೇಣಿಯ ನ್ಯಾಯಾಲಯದಲ್ಲಿ
ಸಿ) ಎ) ಅಥವಾ ಬಿ)
ಡಿ) ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯದಲ್ಲಿ.

33 "No consideration is necessary to create an agency" As per Section 185 of the Indian Contract Act, 1872, above statement is _______
A) correct
B) incorrect
C) partially correct
D) none of the above

"ಅಭಿಕರಣವನ್ನು ಸೃಜಿಸಲು ಯಾವುದೇ ಪ್ರತಿಫಲದ ಅವಶ್ಯಕತೆ ಇರುವುದಿಲ್ಲ" ಭಾರತೀಯ ಕರಾರು ಅಧಿನಿಯಮ 1872ರ ಕಲಂ 185ರ ಪ್ರಕಾರ ಈ ಮೇಲಿನ ಹೇಳಿಕೆಯು _________
ಎ) ಸರಿ
ಬಿ) ಸರಿಯಲ್ಲ
ಸಿ) ಭಾಗಶಃ ಸರಿ
ಡಿ) ಮೇಲಿನ ಯಾವುದು ಅಲ್ಲ

34 Which Article of the Constitution of India describes the effect of Proclamation of Emergency?
A) Article 356
B) Article 355
C) Article 354
D) Article 353

ಭಾರತದ ಸಂವಿಧಾನದ ಯಾವ ಅನುಚ್ಛೇಧವು ತುರ್ತು ಪರಿಸ್ಥಿತಿಯ ಉದ್ಘೋಷಣೆಯ ಪರಿಣಾಮವನ್ನು ವಿವರಿಸುತ್ತದೆ?
ಎ) ಅನುಚ್ಛೇಧ 356
ಬಿ) ಅನುಚ್ಛೇಧ 355
ಸಿ) ಅನುಚ್ಛೇಧ 354
ಡಿ) ಅನುಚ್ಛೇಧ 353

35 As per the Indian Contract Act, 1872, every promise and every set of promise, forming the consideration for each other, is:
A) a contract.
B) an offer.
C) an agreement.
D) an acceptance.

ಭಾರತೀಯ ಕರಾರು ಅಧಿನಿಯಮ 1872ರ ಪ್ರಕಾರ ಒಂದಕ್ಕೆ ಇನ್ನೊಂದು ಪ್ರತಿಫಲವಾಗಿರುವ ಪ್ರತಿಯೊಂದು ವಾಗ್ದಾನವನ್ನು ಮತ್ತು ಪ್ರತಿಯೊಂದು ವಾಗ್ದಾನಗಳನ್ನು _____________ ಎನ್ನುತ್ತಾರೆ:
ಎ) ಕರಾರು
ಬಿ) ಪ್ರಸ್ತಾಪ



Teachingninja.in

ಸಿ) ಒಪ್ಪಂದ
ಡಿ) ಸ್ವೀಕಾರ

36 Bail granted under Section 167 of the Code of Criminal Procedure, 1973 is:
A) Statutory bail.
B) Anticipatory bail.
C) Regular Bail.
D) None of the above.

ಅಪರಾಧ ಪ್ರಕಿಯಾ ಸಂಹಿತೆ, 1973 ಕಲಂ 167ರ ಅಡಿಯಲ್ಲಿ ಮಂಜೂರಾದ ಜಾಮೀನು:
ಎ) ಶಾಸನಾತ್ಮಕ ಜಾಮೀನು
ಬಿ) ನಿರೀಕ್ಷಣಾ ಜಾಮೀನು
ಸಿ) ಸಾಮಾನ್ಯ ಜಾಮೀನು
ಡಿ) ಮೇಲಿನ ಯಾವುದು ಅಲ್ಲ.

37 To avoid the eviction on the ground of arrears of rent under Section 27(2)(a) of the Karnataka Rent Act 1999, a tenant has to pay the arrears of rent within _________ from the date of service of demand notice on him?
A) 15 days
B) one month
C) two months
D) three months

ಕರ್ನಾಟಕ ಬಾಡಿಗೆ ಅಧಿನಿಯಮ, 1999ರ ಕಲಂ 27(2)(ಎ) ಅಡಿಯಲ್ಲಿ ಬಾಡಿಗೆ ಬಾಕಿಯ ಕಾರಣ ಹೊರಹಾಕುವುದನ್ನು ತಪ್ಪಿಸಿಕೊಳ್ಳಲು ಓರ್ವ ಬಾಡಿಗೆದಾರನು ಬೇಡಿಕೆ ನೋಟೀಸು ತನಗೆ ಜಾರಿಯಾದ _________ ಒಳಗಡೆ ಬಾಕಿ ಇರುವ ಬಾಡಿಗೆಯನ್ನು ಪಾವತಿ ಮಾಡಬೇಕು.
ಎ) 15 ದಿನಗಳ
ಬಿ) ಒಂದು ತಿಂಗಳ
ಸಿ) ಎರಡು ತಿಂಗಳ
ಡಿ) ಮೂರು ತಿಂಗಳ

38 What among the following is not required for valid Gift under the Transfer of Property Act, 1882?
A) consideration
B) donor and donee.
C) movable or immovable property
D) transfer and acceptance

ಸ್ವತ್ತು ವರ್ಗಾವಣೆ ಅಧಿನಿಯಮ, 1882ರ ಅಡಿಯಲ್ಲಿ ಕ್ರಮಬದ್ಧ ದಾನಕ್ಕೆ ಈ ಕೆಳಗಿನವುಗಳ ಪೈಕಿ ಯಾವುದರ ಅವಶ್ಯಕತೆ ಇರುವುದಿಲ್ಲ?
ಎ) ಪ್ರತಿಫಲ
ಬಿ) ದಾನಿ ಮತ್ತು ದಾನ ಪಡೆಯುವವರು



Teachingninja.in

ಸಿ) ಸ್ಥಿರ ಅಥವಾ ಚರ ಆಸ್ತಿ
ಡಿ) ವರ್ಗಾವಣೆ ಮತ್ತು ಅಂಗೀಕಾರ

39 Which Section of the Indian Evidence Act, 1872 deals with Court permitting the party to cross-examine the hostile witness?
A) Section 157
B) Section 156
C) Section 155
D) Section 154

ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಯಾವ ಕಲಂ ಪ್ರತಿಕೂಲ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ನ್ಯಾಯಾಲಯವು ಪಕ್ಷಗಾರನಿಗೆ ಪರವಾನಿಗೆ ನೀಡುವುದರ ಬಗ್ಗೆ ವ್ಯವಹರಿಸುತ್ತದೆ?
ಎ) ಕಲಂ 157
ಬಿ) ಕಲಂ 156
ಸಿ) ಕಲಂ 155
ಡಿ) ಕಲಂ 154

40 As per Section 45 of the Indian Evidence Act, 1872, opinions of Experts are:
A) conclusive proof.
B) relevant facts.
C) not relevant facts.
D) none of the above

ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಕಲಂ 45ರ ಪ್ರಕಾರ ತಜ್ಞರ ಅಭಿಪ್ರಾಯಗಳು:
ಎ) ನಿರ್ಣಾಯಕ ಪುರಾವೆ
ಬಿ) ಸುಸಂಬದ್ಧ ಸಂಗತಿ
ಸಿ) ಸುಸಂಬದ್ಧ ಸಂಗತಿ ಅಲ್ಲ
ಡಿ) ಮೇಲಿನ ಯಾವುದು ಅಲ್ಲ

41 Who is the present Attorney General for India?
A) Sri K.K.Venugopal
B) Sri Tushar Mehta
C) Sri Mukul Rohatgi
D) none of the above

ಭಾರತದ ಈಗಿನ ಅಟಾರ್ನಿ ಜನರಲ್ ಯಾರು?
ಎ) ಶ್ರೀ ಕೆ.ಕೆ.ವೇಣುಗೋಪಾಲ್
ಬಿ) ಶ್ರೀ ತುಷಾರ್ ಮೆಹ್ತ
ಸಿ) ಶ್ರೀ ಮುಕುಲ್ ರೋಹಟ್ಗಿ
ಡಿ) ಮೇಲಿನ ಯಾರು ಅಲ್ಲ



Teachingninja.in

42 Under which provision of the Code of Civil Procedure, 1908, Court can permit a party to the suit to examine his witness before examining himself as a witness?
A) Order 18 Rule 1
B) Order 18 Rule 3
C) Order 18 Rule 3A
D) No such provision.

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಯಾವ ನಿಬಂಧನೆಯ ಅಡಿಯಲ್ಲಿ ನ್ಯಾಯಾಲಯವು ಓರ್ವ ಪಕ್ಷಗಾರನಿಗೆ ತನ್ನನ್ನು ಸ್ವತಃ ಸಾಕ್ಷಿ ವಿಚಾರಣೆ ಮಾಡುವ ಮೊದಲು ತನ್ನ ಸಾಕ್ಷಿದಾರನ ವಿಚಾರಣೆ ಮಾಡಲು ಪರವಾನಿಗೆ ನೀಡಬಹುದು?
ಎ) ಕ್ರಮಾದೇಶ 18 ನಿಯಮ 1
ಬಿ) ಕ್ರಮಾದೇಶ 18 ನಿಯಮ 3
ಸಿ) ಕ್ರಮಾದೇಶ 18 ನಿಯಮ 3ಎ
ಡಿ) ಅಂತಹ ಯಾವುದೇ ನಿಬಂಧನೆಗಳಿಲ್ಲ.

43 Presumption regarding abetment under Section 113A of the Indian Evidence Act, 1872, can be raised if suicide by the married woman is committed ______
A) within three years of her marriage.
B) within five years of her marriage.
C) within seven years of her marriage.
D) within ten years of her marriage.

ವಿವಾಹಿತ ಮಹಿಳೆಯು ________ ಆತ್ಮಹತ್ಯೆ ಮಾಡಿಕೊಂಡಲ್ಲಿ ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಕಲಂ 113ಎಯ ಅಡಿಯಲ್ಲಿ ದುಷ್ಪ್ರೇರಣೆಯ ಬಗ್ಗೆ ಪೂರ್ವಭಾವನೆಯನ್ನು ಹೊಂದಬಹುದು.
ಎ) ಆಕೆ ಮದುವೆಯಾದ ಮೂರು ವರ್ಷದೊಳಗಡೆ
ಬಿ) ಆಕೆ ಮದುವೆಯಾದ ಐದು ವರ್ಷದೊಳಗಡೆ
ಸಿ) ಆಕೆ ಮದುವೆಯಾದ ಏಳು ವರ್ಷದೊಳಗಡೆ
ಡಿ) ಆಕೆ ಮದುವೆಯಾದ ಹತ್ತು ವರ್ಷದೊಳಗಡೆ

44 A premises situated within the Kalaburagi Municipal Corporation limits, used for non-residential purpose, having plinth area of sixteen square feets, was let out to a tenant. Which Act is applicable to evict the tenant from the said premises?
A) The Transfer of Property Act, 1882.
B) The Karnataka Rent Act, 1999.
C) Either A) or B)
D) Both A) and B)

ಕಲಬುರಗಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಇರುವ ವಾಸ್ತವ್ಯದ ಉದ್ದೇಶಾಕಗಲ್ಲದ ಮೇಲ್ಛಾಯವನ್ನು ಸೇರಿ 16 ಚದರ ಅಡಿ ವಿಸ್ತೀರ್ಣದ ಒಂದು ಆಸ್ತಿಯನ್ನು ಬಾಡಿಗೆದಾರನಿಗೆ ಬಾಡಿಗೆಗೆ ಕೊಡಲಾಗಿತ್ತು. ಆ ಸ್ವತ್ತಿನಿಂದ ಬಾಡಿಗೆದಾರನನ್ನು ಖಾಲಿ ಮಾಡಿಸಲು ಯಾವ ಅಧಿನಿಯಮ ಅನ್ವಯವಾಗುತ್ತದೆ?
ಎ) ಸ್ವತ್ತು ವರ್ಗಾವಣೆ ಅಧಿನಿಯಮ, 1882
ಬಿ) ಕರ್ನಾಟಕ ಬಾಡಿಗೆ ಅಧಿನಿಯಮ, 1999



Teachingninja.in

ಸಿ) ಎ) ಅಥವಾ ಬಿ)
ಡಿ) ಎ) ಮತ್ತು ಬಿ) ಎರಡೂ

45 After the amendment to the Specific Relief Act, 1963, vide Amendment Act, 2018, to enforce specific performance in favour of plaintiff, his readiness and willingness ________

A) shall be pleaded in the plaint and proved.
B) has to be pleaded in the plaint and proved.
C) has to be proved.
D) neither pleaded nor proved.

ನಿರ್ದಿಷ್ಟ ಪರಿಹಾರ ಅಧಿನಿಯಮ, 1963ಕ್ಕೆ ತಿದ್ದುಪಡಿ ಅಧಿನಿಯಮ 2018ರ ಮೂಲಕ ತಿದ್ದುಪಡಿ ಆದ ನಂತರ ನಿರ್ದಿಷ್ಟ ಪಾಲನೆಯನ್ನು ವಾದಿಯ ಪರವಾಗಿ ಜಾರಿಗೊಳಿಸಲು ಆತ ಸಿದ್ಧನು ಮತ್ತು ಇಷ್ಟವುಳ್ಳವನು ಆಗಿದ್ದ ಎನ್ನುವುದನ್ನು ________

ಎ) ವಾದಪತ್ರದಲ್ಲಿ ಹೇಳತಕ್ಕದ್ದು ಮತ್ತು ರುಜುವಾತುಪಡಿಸತಕ್ಕದ್ದು
ಬಿ) ವಾದಪತ್ರದಲ್ಲಿ ಹೇಳಬೇಕು ಮತ್ತು ರುಜುವಾತುಪಡಿಸಬೇಕು
ಸಿ) ರುಜುವಾತುಪಡಿಸಬೇಕು
ಡಿ) ವಾದಪತ್ರದಲ್ಲಿ ಹೇಳಬೇಕಾಗಿಲ್ಲ ಮತ್ತು ರುಜುವಾತುಪಡಿಸಬೇಕಾಗಿಲ್ಲ

46 The phrase "In lieu of" means:

A) Among other things
B) Instead of
C) In readiness
D) By the mere fact

"ಇನ್ ಲ್ಯೂ ಆಫ್" ಎಂಬ ನುಡಿಗಟ್ಟಿನ ಅರ್ಥ:

ಎ) ಇತರ ವಿಷಯಗಳೊಂದಿಗೆ
ಬಿ) ಬದಲಾಗಿ
ಸಿ) ಸಿದ್ಧತೆಯಲ್ಲಿ
ಡಿ) ಕೇವಲ ವಾಸ್ತವಾಂಶದಿಂದ

47 How many High Courts are there in India at present?

A) 22
B) 23
C) 24
D) 25

ಭಾರತದಲ್ಲಿ ಪ್ರಸ್ತುತ ಎಷ್ಟು ಉಚ್ಚ ನ್ಯಾಯಾಲಯಗಳಿವೆ?

ಎ) 22
ಬಿ) 23
ಸಿ) 24
ಡಿ) 25



Teachingninja.in

48 The Vice-President of India is the ex-officio Chairman of ________
A) Lok Sabha.
B) Rajya Sabha.
C) Planning Commission.
D) Niti Ayoga.

ಭಾರತದ ಉಪ-ರಾಷ್ಟ್ರಪತಿಗಳು ____________ನ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ.
ಎ) ಲೋಕಸಭೆ
ಬಿ) ರಾಜ್ಯಸಭೆ
ಸಿ) ಯೋಜನಾ ಆಯೋಗ
ಡಿ) ನೀತಿ ಆಯೋಗ

49 The correct sequence in formation of a Contract is:
A) Offer, acceptance, consideration, agreement.
B) Offer, acceptance, agreement, consideration.
C) Offer, consideration, acceptance, agreement.
D) Offer, agreement, consideration, acceptance.

ಒಪ್ಪಂದ ರಚನೆಯ ಸರಿಯಾದ ಅನುಕ್ರಮ:
ಎ) ಪ್ರಸ್ತಾಪ, ಸ್ವೀಕಾರ, ಪ್ರತಿಫಲ, ಕರಾರು
ಬಿ) ಪ್ರಸ್ತಾಪ, ಸ್ವೀಕಾರ, ಕರಾರು, ಪ್ರತಿಫಲ
ಸಿ) ಪ್ರಸ್ತಾಪ, ಪ್ರತಿಫಲ, ಸ್ವೀಕಾರ, ಕರಾರು
ಡಿ) ಪ್ರಸ್ತಾಪ, ಕರಾರು, ಪ್ರತಿಫಲ, ಸ್ವೀಕಾರ

50 As per Article 21 of the Constitution of India, no person shall be deprived of his life or personal liberty except according to __________
A) procedure established by law.
B) due course of law.
C) due process of law.
D) any one of the above.

ಭಾರತೀಯ ಸಂವಿಧಾನದ ಅನುಚ್ಛೇಧ 21ರ ಪ್ರಕಾರ __________ ಅನುಸಾರವಾಗಿ ಹೊರತು, ಯಾರೇ ವ್ಯಕ್ತಿಯ ಜೀವವನ್ನು ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನು ಹರಣ ಮಾಡತಕ್ಕದಲ್ಲ.
ಎ) ಕಾನೂನಿನ ಮೂಲಕ ಸ್ಥಾಪಿತವಾಗಿರುವ ಪ್ರಕ್ರಿಯೆಗೆ
ಬಿ) ಸರಿಯಾದ ಕಾನೂನಿನ ಮಾರ್ಗದ ಮೂಲಕ
ಸಿ) ಸರಿಯಾದ ಕಾನೂನಿನ ಪ್ರಕ್ರಿಯೆ ಮೂಲಕ
ಡಿ) ಮೇಲಿನ ಯಾವುದಾದರೊಂದು

51 "Causing grievous hurt whilst committing lurking house trespass or house breaking", an offence punishable under Sec.459 of Indian Penal Code, is triable by the Court of:
A) Any Magistrate
B) Judicial Magistrate of First Class
C) Chief Judicial Magistrate
D) Court of Sessions



Teachingninja.in

ಭಾರತೀಯ ದಂಡ ಸಂಹಿತೆಯ ಕಲಂ 459ರ ಅಡಿಯಲ್ಲಿ ಶಿಕ್ಷಾರ್ಹವಾಗಿರುವ "ಹೊಂಚು ಹಾಕಿ ಗೃಹಾತಿಕ್ರಮಣ ಮಾಡಿದಾಗ ಅಥವಾ ಮನೆಗೆ ಕನ್ನ ಹಾಕುವಾಗ ಮಾಡಿದ ತೀವ್ರ ಗಾಯ" ಅಪರಾಧದ ವಿಚಾರಣೆ ಮಾಡಬೇಕಾಗಿರುವ ನ್ಯಾಯಾಲಯ:
ಎ) ಯಾವುದೇ ದಂಡಾಧಿಕಾರಿ
ಬಿ) ಪ್ರಥಮ ದರ್ಜೆ ನ್ಯಾಯಾಂಗ ದಂಡಾಧಿಕಾರಿ
ಸಿ) ಮುಖ್ಯ ನ್ಯಾಯಾಂಗ ದಂಡಾಧಿಕಾರಿ
ಡಿ) ಸತ್ರ ನ್ಯಾಯಾಲಯ

52 A, who is the resident of Ballari, entered into a sale agreement with B, who is the resident of Koppal, to purchase the landed property situated at Gadag. If B refused to execute the sale deed, A has to file a suit for specific performance in a _________:
A) Court at Ballari
B) Court at Koppal
C) Court at Gadag
D) either at Ballari or at Koppal or at Gadag Court.

ಬಳ್ಳಾರಿಯ ವಾಸಿ ಎ, ಕೊಪ್ಪಳದ ವಾಸಿಯಾಗಿರುವ ಬಿ ಯೊಂದಿಗೆ, ಗದಗಿನಲ್ಲಿರುವ ಜಮೀನು ಖರೀದಿಸುವ ಬಗ್ಗೆ ಖರೀದಿ ಕರಾರನ್ನು ಮಾಡಿಕೊಳ್ಳುತ್ತಾರೆ. ಬಿ ಯು ಖರೀದಿ ಪತ್ರವನ್ನು ಬರೆದುಕೊಡಲು ನಿರಾಕರಿಸಿದಲ್ಲಿ ಎ ಯು ನಿರ್ದಿಷ್ಟ ಪಾಲನಾ ದಾವೆಯನ್ನು _________ ಹೂಡಬೇಕು.
ಎ) ಬಳ್ಳಾರಿಯಲ್ಲಿನ ನ್ಯಾಯಾಲಯದಲ್ಲಿ
ಬಿ) ಕೊಪ್ಪಳದಲ್ಲಿನ ನ್ಯಾಯಾಲಯದಲ್ಲಿ
ಸಿ) ಗದಗಿನಲ್ಲಿನ ನ್ಯಾಯಾಲಯದಲ್ಲಿ
ಡಿ) ಬಳ್ಳಾರಿ ಅಥವಾ ಕೊಪ್ಪಳ ಅಥವಾ ಗದಗ್‌ನಲ್ಲಿನ ನ್ಯಾಯಾಲಯದಲ್ಲಿ

53 As per Section 68 of the Indian Evidence Act, 1872, a document required by law to be attested can be proved by examining _______
A) at least one of the attesting witnesses.
B) at least two of the attesting witnesses
C) all the attesting witnesses.
D) some other person, who has the knowledge of that document

ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಕಲಂ 68ರ ಪ್ರಕಾರ ಕಾನೂನಿನ ಮೇರೆಗೆ ದೃಢೀಕರಣಗೊಳ್ಳಲೇಕಾದ ದಾಖಲಾತಿಯನ್ನು _________ ವಿಚಾರಣೆ ಮಾಡಿ ಸಾಬೀತು ಪಡಿಸಬಹುದು:
ಎ) ಕನಿಷ್ಠ ಓರ್ವ ದೃಢೀಕೃತ ಸಾಕ್ಷಿಯನ್ನು
ಬಿ) ಕನಿಷ್ಠ ಎರಡು ದೃಢೀಕೃತ ಸಾಕ್ಷಿಗಳನ್ನು
ಸಿ) ಎಲ್ಲಾ ದೃಢೀಕೃತ ಸಾಕ್ಷಿಗಳನ್ನು
ಡಿ) ಆ ದಾಖಲೆಯ ಬಗ್ಗೆ ಮಾಹಿತಿ ಇರುವ ಇತರ ಯಾವುದೇ ವ್ಯಕ್ತಿಯನ್ನು

54 Section 118 of the Negotiable Instruments Act, 1881 relates to:
A) Presumptions as to foreign law.
B) Presumptions in favour of holder of a cheque.
C) Presumptions as to negotiable instruments.
D) Presumptions on proof of protest.



Teachingninja.in

ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881ರ ಕಲಂ 118 ಸಂಬಂಧಿಸಿದ್ದು:
ಎ) ವಿದೇಶಿ ಕಾನೂನು ಬಗ್ಗೆ ಪೂರ್ವಭಾವನೆ
ಬಿ) ಚೆಕ್ಕಿನ ಸ್ವಾಧೀನ ಹೊಂದಿದವರ ಪರವಾಗಿ ಪೂರ್ವಭಾವನೆ
ಸಿ) ವರ್ಗಾವಣೀಯ ಲಿಖಿತಗಳ ಬಗ್ಗೆ ಪೂರ್ವಭಾವನೆ
ಡಿ) ಆಕ್ಷೇಪಣೆಯ ರುಜುವಾತಿನ ಬಗ್ಗೆ ಪೂರ್ವಭಾವನೆ

55 As per Section 468 of the Code of Criminal Procedure, 1973, if the offence is punishable with fine only, period of limitation for taking cognizance of the said offence is:
A) Three years.
B) One year.
C) Six months.
D) No limitation.

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 468ರ ಪ್ರಕಾರ, ಅಪರಾಧವು ಜುಲ್ಮಾನೆಯಿಂದ ಮಾತ್ರ ದಂಡನೀಯವಾಗಿದ್ದರೆ ಅಂತಹ ಅಪರಾಧದ ಸಂಜ್ಞೇಯನ್ನು ತೆಗೆದುಕೊಳ್ಳಲು ಇರುವ ಕಾಲಮಿತಿ:
ಎ) ಮೂರು ವರ್ಷ
ಬಿ) ಒಂದು ವರ್ಷ
ಸಿ) ಆರು ತಿಂಗಳು
ಡಿ) ಯಾವುದೇ ಕಾಲಮಿತಿ ಇಲ್ಲ

56 As per Section 320(8) of the Code of Criminal Procedure, 1973, compounding of an offence under Section 320 of the said Code, will results in __________
A) acquittal of the accused.
B) discharge of the accused.
C) conviction of the accused.
D) withdrawal of the case.

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 320(8)ರ ಪ್ರಕಾರ ಆ ಸಂಹಿತೆಯ ಕಲಂ 320ರ ಅಡಿಯಲ್ಲಿ ಅಪರಾಧವನ್ನು ರಾಜಿಗೊಳಿಸಿದಾಗ ಅದರ ಪರಿಣಾಮ ________ ಎಂದಾಗುತ್ತದೆ.
ಎ) ಆರೋಪಿಯು ನಿರಪರಾಧಿ
ಬಿ) ಆರೋಪಿಯ ಬಿಡುಗಡೆ
ಸಿ) ಆರೋಪಿಯನ್ನು ಶಿಕ್ಷಿಸಲಾಗಿದೆ
ಡಿ) ಪ್ರಕರಣವನ್ನು ಹಿಂಪಡೆಯಲಾಗಿದೆ

57 Power of transferring any suit from one Court to another, under Section 24 of the Code of Civil Procedure, 1908, can be exercised by:
A) only the High Court.
B) only the District Court.
C) the High Court or the District Court.
D) the High Court or the District Court or the Civil Court.



Teachingninja.in

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕಲಂ 24ರ ಅಡಿಯಲ್ಲಿ ಯಾವುದೇ ದಾವೆಯನ್ನು ಒಂದು ನ್ಯಾಯಾಲಯದಿಂದ ಇನ್ನೊಂದಕ್ಕೆ ವರ್ಗಾವಣೆ ಮಾಡುವ ಅಧಿಕಾರವನ್ನು ಚಲಾಯಿಸಬಹುದಾಗಿದ್ದು:
ಎ) ಉಚ್ಚ ನ್ಯಾಯಾಲಯ ಮಾತ್ರ
ಬಿ) ಜಿಲ್ಲಾ ನ್ಯಾಯಾಲಯ ಮಾತ್ರ
ಸಿ) ಉಚ್ಚ ನ್ಯಾಯಾಲಯ ಅಥವಾ ಜಿಲ್ಲಾ ನ್ಯಾಯಾಲಯ.
ಡಿ) ಉಚ್ಚ ನ್ಯಾಯಾಲಯ ಅಥವಾ ಜಿಲ್ಲಾ ನ್ಯಾಯಾಲಯ ಅಥವಾ ಸಿವಿಲ್ ನ್ಯಾಯಾಲಯ.

58 "Causing death by rash and negligent act" an offence punishable under Section 304A of the Indian Penal Code is_____
A) cognizable, bailable and non-compoundable offence.
B) non-cognizable, bailable and compoundable offence.
C) cognizable, non-bailable and compoundable offence.
D) non-cognizable, non-bailable and non-compoundable offence.

ಭಾರತೀಯ ದಂಡ ಸಂಹಿತೆಯ ಕಲಂ 304ಎ ಅಡಿಯಲ್ಲಿ ಶಿಕ್ಷಾರ್ಹವಾಗಿರುವ ಅಪರಾಧ "ದುಡುಕಿನ ಅಥವಾ ನಿರ್ಲಕ್ಷ್ಯದ ಕೃತ್ಯದಿಂದ ಮರಣ ಉಂಟು ಮಾಡುವುದು" __________
ಎ) ಸಂಜ್ಞೇಯ, ಜಾಮಿನೀಯ ಮತ್ತು ರಾಜಿ ಮಾಡಲು ಆಗದೇ ಇರುವ ಅಪರಾಧ
ಬಿ) ಅಸಂಜ್ಞೇಯ, ಜಾಮಿನೀಯ ಮತ್ತು ರಾಜಿ ಮಾಡಬಹುದಾದ ಅಪರಾಧ
ಸಿ) ಸಂಜ್ಞೇಯ, ಜಾಮಿನೀಯವಲ್ಲದ ಮತ್ತು ರಾಜಿ ಮಾಡಬಹುದಾದ ಅಪರಾಧ
ಡಿ) ಅಸಂಜ್ಞೇಯ, ಜಾಮಿನೀಯವಲ್ಲದ ಮತ್ತು ರಾಜಿ ಮಾಡಲು ಆಗದೇ ಇರುವ ಅಪರಾಧ.

59 Section 10 of the Transfer of Property Act, 1882 deals with following subject:
A) Condition restraining alienation.
B) Persons competent to transfer.
C) Rule against perpetuity.
D) Vested interest.

ಸ್ವತ್ತು ವರ್ಗಾವಣೆ ಅಧಿನಿಯಮ, 1882ರ ಕಲಂ 10 ಈ ಕೆಳಗಿನ ವಿಷಯವನ್ನು ವ್ಯವಹರಿಸುತ್ತದೆ:
ಎ) ಪರಭಾರೆಯನ್ನು ನಿಗ್ರಹಿಸುವ ಷರತ್ತು
ಬಿ) ವರ್ಗಾವಣೆ ಮಾಡಲು ಸಕ್ಷಮವಾದ ವ್ಯಕ್ತಿಗಳು
ಸಿ) ಶಾಶ್ವತತೆಯ ವಿರುದ್ಧ ನಿಯಮ
ಡಿ) ನಿಹಿತ ಹಿತಾಸಕ್ತಿ

60 "Admission" as defined under Section 17 of the Indian Evidence Act, 1872, is _________
A) a statement in writing only
B) a oral statement only
C) a statement in electronic form only
D) a statement either oral or documentary or in electronic form

ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಕಲಂ 17ರ ಅಡಿಯಲ್ಲಿ ವ್ಯಾಖ್ಯಾನಿಸಿರುವ "ಸಮ್ಮತಿ" ಎಂದರೆ __________
ಎ) ಲಿಖಿತ ರೂಪದಲ್ಲಿ ಇರುವಂತಹ ಹೇಳಿಕೆ ಮಾತ್ರ
ಬಿ) ಮೌಖಿಕವಾದ ಹೇಳಿಕೆ ಮಾತ್ರ



Teachingninja.in

ಸಿ) ವಿದ್ಯುನ್ಮಾನ ರೂಪದಲ್ಲಿ ಇರುವ ಹೇಳಿಕೆ ಮಾತ್ರ
ಡಿ) ಮೌಖಿಕ ಅಥವಾ ಲಿಖಿತ ಅಥವಾ ವಿದ್ಯುನ್ಮಾನ ರೂಪದಲ್ಲಿರುವ ಹೇಳಿಕೆ

61 "The suit is dismissed with costs" implies:
A) plaintiff is entitle for costs from the defendant.
B) defendant is entitle for costs from the plaintiff.
C) both the parties are entitle for costs from eath other.
D) both the parties to bear thier respective costs.

"ದಾವೆಯನ್ನು ಖರ್ಚು ಸಹಿತ ವಜಾ ಮಾಡಲಾಗಿದೆ" ಎಂದರೆ:
ಎ) ವಾದಿಯು ಪ್ರತಿವಾದಿಯಿಂದ ಖರ್ಚು ಪಡೆಯಲು ಅರ್ಹನಾಗಿರುತ್ತಾನೆ.
ಬಿ) ಪ್ರತಿವಾದಿಯು ವಾದಿಯಿಂದ ಖರ್ಚು ಪಡೆಯಲು ಅರ್ಹನಾಗಿರುತ್ತಾನೆ.
ಸಿ) ಉಭಯ ಪಕ್ಷಗಾರರು ಪರಸ್ಪರ ಖರ್ಚು ಪಡೆಯಲು ಅರ್ಹರಿರುತ್ತಾರೆ.
ಡಿ) ಉಭಯ ಪಕ್ಷಗಾರರು ತಮ್ಮ ತಮ್ಮ ಖರ್ಚನ್ನು ತಾವೆ ವಹಿಸಿಕೊಳ್ಳತಕ್ಕದ್ದು.

62 As per Constitution of India, "Promotion of international peace and security" is a __________
A) Fundamental duty
B) Fundamental right
C) Directive Principles of state policy
D) none of the above

ಭಾರತೀಯ ಸಂವಿಧಾನದ ಪ್ರಕಾರ "ಅಂತರರಾಷ್ಟ್ರೀಯ ಶಾಂತಿಯನ್ನು ಮತ್ತು ಭದ್ರತೆಯನ್ನು ವೃದ್ಧಿಗೊಳಿಸುವುದು" ಒಂದು __________
ಎ) ಮೂಲಭೂತ ಕರ್ತವ್ಯ
ಬಿ) ಮೂಲಭೂತ ಹಕ್ಕು
ಸಿ) ರಾಜ್ಯನೀತಿಯ ನಿರ್ದೇಶಕ ತತ್ವ
ಡಿ) ಮೇಲಿನ ಯಾವುದು ಅಲ್ಲ

63 As per Specific Relief Act, 1963, a suit for recovery can be filed in respect of:
A) immovable property only.
B) movable property only.
C) both movable and immovable property.
D) none of the above

ನಿರ್ದಿಷ್ಟ ಪರಿಹಾರ ಅಧಿನಿಯಮ, 1963ರ ಪ್ರಕಾರ ಸ್ವಾಧೀನವನ್ನು ಪಡೆದುಕೊಳ್ಳಲು ದಾವೆಯನ್ನು __________ ಸಲ್ಲಿಸಬಹುದು.
ಎ) ಸ್ಥಿರಾಸ್ತಿಗಳ ಬಗ್ಗೆ ಮಾತ್ರ
ಬಿ) ಚರಾಸ್ತಿಗಳ ಬಗ್ಗೆ ಮಾತ್ರ
ಸಿ) ಚರಾಸ್ತಿ ಮತ್ತು ಸ್ಥಿರಾಸ್ತಿ ಎರಡೂ
ಡಿ) ಮೇಲಿನ ಯಾವುದು ಅಲ್ಲ



Teachingninja.in

64 As per Article 50 of the Constitution of India, the State shall take steps to separate the judiciary from the executive ____________
A) in the judicial service of the State
B) in the public services of the State.
C) in the military services of the State.
D) in the administrative service of the State.

ಭಾರತೀಯ ಸಂವಿಧಾನದ ಅನುಚ್ಛೇದ 50ರ ಪ್ರಕಾರ ________ ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸಲು ರಾಜ್ಯವು ಕ್ರಮ ಕೈಗೊಳ್ಳತಕ್ಕದ್ದು.
ಎ) ರಾಜ್ಯದ ನ್ಯಾಯಾಂಗ ಸೇವೆಯಲ್ಲಿ
ಬಿ) ರಾಜ್ಯದ ಲೋಕ ಸೇವೆಯಲ್ಲಿ
ಸಿ) ರಾಜ್ಯದ ಮಿಲಿಟರಿ ಸೇವೆಯಲ್ಲಿ
ಡಿ) ರಾಜ್ಯದ ಆಡಳಿತ ಸೇವೆಯಲ್ಲಿ

65 Under which Section of the Code of Civil Procedure, 1908, a Second Appeal can be filed before the High Court?
A) Section 99
B) Section 100A
C) Section 99A
D) Section 100

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಯಾವ ಕಲಂನ ಅಡಿಯಲ್ಲಿ ಉಚ್ಚ ನ್ಯಾಯಾಲಯದ ಮುಂದೆ ಎರಡನೇ ಮೇಲ್ಮನವಿಯನ್ನು ಸಲ್ಲಿಸಬಹುದು?
ಎ) ಕಲಂ 99
ಬಿ) ಕಲಂ 100ಎ
ಸಿ) ಕಲಂ 99ಎ
ಡಿ) ಕಲಂ 100

66 For the act of criminal conspiracy defined under Section 120A of the Indian Penal Code, minimum number of persons required are:
A) Seven.
B) Five.
C) Three.
D) Two.

ಭಾರತೀಯ ದಂಡ ಸಂಹಿತೆಯ ಕಲಂ 120ಎ ಅಡಿಯಲ್ಲಿ ವಿವರಿಸಿರುವ ಅಪರಾಧಿಕ ಒಳಸಂಚಿನ ಕೃತ್ಯಕ್ಕೆ ಅಗತ್ಯವಿರುವ ಕನಿಷ್ಠ ವ್ಯಕ್ತಿಗಳು:
ಎ) ಏಳು
ಬಿ) ಐದು
ಸಿ) ಮೂರು
ಡಿ) ಎರಡು



Teachingninja.in

67 A judgment on admission can be given under______of the Code of Civil Procedure, 1908
A) Order 12 Rule 5
B) Order 20 Rule 3
C) Order 20 Rule 1
D) Order 12 Rule 6

ಒಪ್ಪಿಗೆಯ ಮೇಲೆ ತೀರ್ಪನ್ನು ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ __________ ಅಡಿಯಲ್ಲಿ ಕೊಡಬಹುದು.
ಎ) ಕ್ರಮಾದೇಶ 12 ನಿಯಮ 5
ಬಿ) ಕ್ರಮಾದೇಶ 20 ನಿಯಮ 3
ಸಿ) ಕ್ರಮಾದೇಶ 20 ನಿಯಮ 1
ಡಿ) ಕ್ರಮಾದೇಶ 12 ನಿಯಮ 6

68 What forms the basis for rejection of plaint under Order VII Rule 11 of Code of Civil Procedure, 1908?
A) Only the pleadings of the plaintiff
B) Both the pleadings of plaintiff and the defendant
C) pleadings of both the parties and the documents produced by them
D) all the above

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 7 ನಿಯಮ 11ರ ಅಡಿಯಲ್ಲಿ ವಾದಪತ್ರವನ್ನು ತಿರಸ್ಕರಿಸಲು ಯಾವುದು ಆಧಾರವಾಗಿರುತ್ತದೆ?
ಎ) ವಾದಿಯ ವಾದಪತ್ರ ಮಾತ್ರ
ಬಿ) ವಾದಿ ಮತ್ತು ಪ್ರತಿವಾದಿ ಇಬ್ಬರ ವಾದ ಮತ್ತು ಪ್ರತಿವಾದ ಪತ್ರ
ಸಿ) ಉಭಯ ಪಕ್ಷಗಾರರ ವಾದ ಮತ್ತು ಪ್ರತಿವಾದ ಪತ್ರ ಮತ್ತು ಅವರು ಹಾಜರುಪಡಿಸಿರುವ ದಾಖಲಾತಿಗಳು
ಡಿ) ಮೇಲಿನ ಎಲ್ಲವೂ

69 As per Section 41 of the Specific Relief Act, 1963, an injunction can not be granted __________
A) when the plaintiff has no personal interest in the matter.
B) to prevent the breach of a contract the performance of which would not be specifically enforced
C) to restrain any person from applying to any legislative body
D) All the above.

ನಿರ್ದಿಷ್ಟ ಪರಿಹಾರ ಅಧಿನಿಯಮ, 1963ರ ಕಲಂ 41ರ ಪ್ರಕಾರ ____________ ನಿರ್ಭಂದಕಾಜ್ಞೆಯನ್ನು ಕೊಡಲಾಗುವುದಿಲ್ಲ.
ಎ) ವಾದಿಗೆ ಆ ವಿಷಯದಲ್ಲಿ ವೈಯಕ್ತಿಕ ಹಿತಾಸಕ್ತಿ ಇಲ್ಲದಿರುವಾಗ
ಬಿ) ಪಾಲನೆಯನ್ನು ನಿರ್ದಿಷ್ಟವಾಗಿ ಜಾರಿಗೊಳಿಸಲಾಗದ ಕರಾರಿನ ಉಲ್ಲಂಘನೆಯನ್ನು ನಿವಾರಿಸಲು
ಸಿ) ಶಾಸಾಕಾಂಗ ಸಂಸ್ಥೆಗೆ ಅರ್ಜಿ ಸಲ್ಲಿಸದಂತೆ ಯಾವನೇ ವ್ಯಕ್ತಿಯನ್ನು ಪ್ರತಿಬಂಧಿಸಲು
ಡಿ) ಮೇಲಿನ ಎಲ್ಲವೂ

70 As per Article 124 of the Constitution of India, a distinguished jurist can be appointed as a Judge of the______
A) Supreme Court.
B) High Court.



Teachingninja.in

C) Both (A) and (B)
D) Can not be appointed

ಭಾರತೀಯ ಸಂವಿಧಾನದ ಅನುಚ್ಛೇಧ 124ರ ಪ್ರಕಾರ ಓರ್ವ ಪ್ರತಿಷ್ಠಿತ ನ್ಯಾಯಶಾಸ್ತ್ರಜ್ಞನನ್ನು ________ ನ್ಯಾಯಮೂರ್ತಿಯಾಗಿ ನೇಮಿಸಬಹುದು.
ಎ) ಸರ್ವೋಚ್ಚ ನ್ಯಾಯಾಲಯದ
ಬಿ) ಉಚ್ಚ ನ್ಯಾಯಾಲಯದ
ಸಿ) (ಎ) ಮತ್ತು (ಬಿ) ಎರಡೂ
ಡಿ) ನೇಮಿಸಲಾಗುವುದಿಲ್ಲ

71 For the purpose of Sec.28, 29, 30 and 31 of the Karnataka Rent Act, 1999 "immediate possession" means possession recoverable within ________ from date of order of eviction.
A) One year.
B) 90 days.
C) 60 days.
D) 30 days.

ಕರ್ನಾಟಕ ಬಾಡಿಗೆ ಅಧಿನಿಯಮ, 1999ರ ಕಲಂ 28, 29, 30 ಮತ್ತು 31ರ ಉದ್ದೇಶಕ್ಕಾಗಿ "ತತ್‌ಕ್ಷಣದ ಸ್ವಾಧೀನತೆ" ಎಂದರೆ ಖಾಲಿ ಮಾಡುವ ಆದೇಶವಾದ ದಿನಾಂಕದಿಂದ ________ ಒಳಗೆ ಪುನರ್ ಸ್ವಾಧೀನತೆಯನ್ನು ಪಡೆದುಕೊಳ್ಳುವುದು ಎಂದರ್ಥ.
ಎ) ಒಂದು ವರ್ಷದ
ಬಿ) 90 ದಿನಗಳ
ಸಿ) 60 ದಿನಗಳ
ಡಿ) 30 ದಿನಗಳ

72 Which Section of the Indian Penal Code is related to unnatural sex:
A) Section 354
B) Section 376
C) Section 377
D) Section 382

ಭಾರತೀಯ ದಂಡ ಸಂಹಿತೆಯ ಯಾವ ಕಲಂ ಅನೈಸರ್ಗಿಕ ಲೈಂಗಿಕತೆಗೆ ಸಂಬಂಧಿಸಿದ್ದಾಗಿದೆ?
ಎ) ಕಲಂ 354
ಬಿ) ಕಲಂ 376
ಸಿ) ಕಲಂ 377
ಡಿ) ಕಲಂ 382

73 Which one of the following is incorrect regarding state and its capital?
A) Andhra Pradesh – Amaravati.
B) Telangana – Hydarabad.
C) Tamil Nadu – Chennai.
D) Kerala - Cochin



Teachingninja.in

ರಾಜ್ಯ ಮತ್ತು ಅವುಗಳ ರಾಜಧಾನಿಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಪೈಕಿ ಯಾವುದೊಂದು ಸರಿಯಾಗಿರುವುದಿಲ್ಲ?
ಎ) ಆಂಧ್ರಪ್ರದೇಶ – ಅಮರಾವತಿ
ಬಿ) ತೆಲಂಗಾಣ – ಹೈದರಬಾದ್
ಸಿ) ತಮಿಳುನಾಡು – ಚೆನ್ನೈ
ಡಿ) ಕೇರಳ – ಕೊಚ್ಚಿನ್

74 Which amendment to the Constitution of India requires ratification by the States legislatures?
A) Any changes in Articles 54, 55, 73, 162 and 241.
B) Any changes in any of lists in Seventh Schedule.
C) Any changes in the representation of states in Parliament.
D) All the above

ಭಾರತೀಯ ಸಂವಿಧಾನದ ಯಾವ ತಿದ್ದುಪಡಿಗೆ ರಾಜ್ಯ ವಿಧಾನಮಂಡಲಗಳ ಅನುಸಮರ್ಥನೆಯ ಅಗತ್ಯವಿದೆ?
ಎ) ಅನುಚ್ಛೇಧ 54, 55, 73, 162 ಮತ್ತು 241ರ ಯಾವುದೇ ತಿದ್ದುಪಡಿ
ಬಿ) ಏಳನೇ ಅನುಸೂಚಿಯಲ್ಲಿನ ಪಟ್ಟಿಗಳ ಪೈಕಿ ಯಾವುದೇ ಒಂದು ಪಟ್ಟಿಯಲ್ಲಿನ ಯಾವುದೇ ತಿದ್ದುಪಡಿ
ಸಿ) ಸಂಸತ್ತಿನಲ್ಲಿ ರಾಜ್ಯಗಳಿಗಿರುವ ಪ್ರಾತಿನಿಧ್ಯದಲ್ಲಿ ಯಾವುದೇ ತಿದ್ದುಪಡಿ
ಡಿ) ಮೇಲಿನ ಎಲ್ಲವೂ

75 Landmark judgment of the Supreme Court of India in “Smt.Selvi vs State of Karnataka” is relating to the following subject:
A) Registration of First Information Report.
B) Arrest of the accused.
C) Bail
D) Narco analysis test.

"ಶ್ರೀಮತಿ ಸೆಲ್ವಿ ವಿರುದ್ಧ ಕರ್ನಾಟಕ ರಾಜ್ಯ" ಪ್ರಕರಣದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯದ ಗುರುತರವಾದ ತೀರ್ಪು ಈ ಕೆಳಗಿನ ವಿಷಯಕ್ಕೆ ಸಂಬಂಧಿಸಿದ್ದು:
ಎ) ಪ್ರಥಮ ವರ್ತಮಾನ ವರದಿ ದಾಖಲು ಮಾಡುವುದು
ಬಿ) ಆರೋಪಿಯ ಬಂಧನ
ಸಿ) ಜಾಮೀನು
ಡಿ) ಮಂಪರು ವಿಶ್ಲೇಷಣಾ ಪರೀಕ್ಷೆ

76 “Every confession is an admission, but every admission is not a confession” This statement is __________
A) true
B) false
C) partly true.
D) none of the above.

"ಪ್ರತಿಯೊಂದು ತಪ್ಪೊಪ್ಪಿಗೆಯು ಸಮ್ಮತಿಯಾಗಿರುತ್ತದೆ, ಆದರೆ ಪ್ರತಿಯೊಂದು ಸಮ್ಮತಿಯು ತಪ್ಪೊಪ್ಪಿಗೆಯಾಗಿರುವುದಿಲ್ಲ" ಈ ಹೇಳಿಕೆಯು __________
ಎ) ಸರಿ
ಬಿ) ತಪ್ಪು



Teachingninja.in

ಸಿ) ಭಾಗಶಃ ಸರಿ
ಡಿ) ಮೇಲಿನ ಯಾವುದು ಅಲ್ಲ

77 Bail jurisdiction under Section 439 of the Code of Criminal Procedure, 1973 can be exercised by:
A) only the Magistrate
B) only the Court of Sessions.
C) only the High Court.
D) Both B) and C)

ಅಪರಾಧ ಪ್ರಕಿಯಾ ಸಂಹಿತೆ, 1973ರ ಕಲಂ 439ರ ಅಡಿಯಲ್ಲಿನ ಜಾಮೀನು ಕಾರ್ಯವ್ಯಾಪ್ತಿಯನ್ನು ಚಲಾಯಿಸಬಹುದಾಗಿದ್ದು:
ಎ) ದಂಡಾಧಿಕಾರಿಗಳು ಮಾತ್ರ
ಬಿ) ಸತ್ರ ನ್ಯಾಯಾಲಯ ಮಾತ್ರ
ಸಿ) ಉಚ್ಚ ನ್ಯಾಯಾಲಯ ಮಾತ್ರ
ಡಿ) ಬಿ) ಮತ್ತು ಸಿ) ಎರಡೂ

78 As per Section 147 of the Negotiable Instruments Act, 1881, every offence punishable under the said Act shall be ________ offence.
A) compoundable
B) not compoundable
C) compoundable only with the permission of the Court
D) none of the above

ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881ರ ಕಲಂ 147ರ ಪ್ರಕಾರ ಆ ಅಧಿನಿಯಮದ ಅಡಿಯಲ್ಲಿ ಶಿಕ್ಷಾರ್ಹವಾಗಿರವ ಎಲ್ಲಾ ಅಪರಾಧಗಳು ____________ ಅಪರಾಧಗಳು.
ಎ) ರಾಜಿಗೊಳಿಸುವ
ಬಿ) ರಾಜಿಗೊಳಿಸಲಾಗದ
ಸಿ) ನ್ಯಾಯಾಲಯದಿಂದ ಅನುಮತಿ ಪಡೆದಲ್ಲಿ ಮಾತ್ರ ರಾಜಿಗೊಳಿಸುವ
ಡಿ) ಮೇಲಿನ ಯಾವುದು ಅಲ್ಲ

79 As per Order 22 Rule 6 of the Code of Civil Procedure, 1908, if any party to the suit dies after conclusion of hearing and before pronouncing the judgment ____________
A) The suit shall not abate.
B) The suit shall abate.
C) The suit shall not abate if cause of action and right to sue survives
D) It will be deemed that judgment has been pronounced after death of a party.

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 22 ನಿಯಮ 6ರ ಪ್ರಕಾರ ಸುನಾವಣೆ ಮುಕ್ತಾಯವಾದ ನಂತರ ಮತ್ತು ತೀರ್ಪನ್ನು ಉಚ್ಚರಿಸುವ ಮೊದಲು ದಾವೆಯ ಯಾವುದೇ ಪಕ್ಷಗಾರ ಮರಣ ಹೊಂದಿದಲ್ಲಿ ________
ಎ) ದಾವೆಯು ಕೊನೆಗೊಳ್ಳತಕ್ಕದಲ್ಲ
ಬಿ) ದಾವೆಯು ಕೊನೆಗೊಳ್ಳುತ್ತದೆ



Teachingninja.in

ಸಿ) ವ್ಯಾಜ್ಯ ಕಾರಣ ಮತ್ತು ದಾವಾ ಸಲ್ಲಿಸುವ ಹಕ್ಕು ಉಳಿದುಕೊಂಡಲ್ಲಿ ದಾವಾವು ಕೊನೆಗೊಳ್ಳುವುದಿಲ್ಲ
ಡಿ) ಓರ್ವ ಪಕ್ಷಗಾರ ಮರಣ ಹೊಂದಿದ ನಂತರ ತೀರ್ಪನ್ನು ಉಚ್ಚರಿಸಲಾಗಿದೆ ಎಂದು ಪರಿಗಣಿಸಲಾಗುವುದು.

80 What is the meaning of English term "attire"?
A) tired.
B) dress.
C) attention.
D) singing

"ಅಟೈರ್" ಎನ್ನುವ ಆಂಗ್ಲ ಪದದ ಅರ್ಥ ಏನು?
ಎ) ಸುಸ್ತಾಗಿರುವುದು
ಬಿ) ವಸ್ತ್ರ
ಸಿ) ಗಮನ ಹರಿಸುವುದು
ಡಿ) ಹಾಡುವುದು

81 "Voluntarily causing hurt by dangerous weapons", an offence under Section 324 of Indian Penal Code, is punishable with:
A) imprisonment up to one year or with fine or with both.
B) imprisonment up to two years or with fine or with both.
C) imprisonment up to three years or with fine or with both.
D) imprisonment up to five years or with fine or with both.

ಭಾರತೀಯ ದಂಡ ಸಂಹಿತೆಯ ಕಲಂ 324ರ ಅಡಿಯಲ್ಲಿನ "ಅಪಾಯಕಾರಿ ಆಯುಧಗಳಿಂದ ಸ್ವಇಚ್ಛೆಯಿಂದ ಗಾಯವನ್ನುಂಟು ಮಾಡುವುದು" ಅಪರಾಧಕ್ಕೆ ಇರುವ ಶಿಕ್ಷೆ:
ಎ) ಒಂದು ವರ್ಷದ ಕಾಲಾವಧಿಯವರೆಗಿನ ಕಾರಾಗೃಹ ವಾಸ ಅಥವಾ ಜುಲ್ಮಾನೆಯ ದಂಡ ಅಥವಾ ಎರಡೂ.
ಬಿ) ಎರಡು ವರ್ಷದ ಕಾಲಾವಧಿಯವರೆಗಿನ ಕಾರಾಗೃಹ ವಾಸ ಅಥವಾ ಜುಲ್ಮಾನೆಯ ದಂಡ ಅಥವಾ ಎರಡೂ.
ಸಿ) ಮೂರು ವರ್ಷದ ಕಾಲಾವಧಿಯವರೆಗಿನ ಕಾರಾಗೃಹ ವಾಸ ಅಥವಾ ಜುಲ್ಮಾನೆಯ ದಂಡ ಅಥವಾ ಎರಡೂ.
ಡಿ) ಐದು ವರ್ಷದ ಕಾಲಾವಧಿಯವರೆಗಿನ ಕಾರಾಗೃಹ ವಾಸ ಅಥವಾ ಜುಲ್ಮಾನೆಯ ದಂಡ ಅಥವಾ ಎರಡೂ.

82 As per Section 77 of the Indian Evidence Act, 1872, contents of the public documents can be proved __________
A) By examining the public servant concerned.
B) By production of certified copies of the documents in question.
C) By securing the original public documents.
D) By obtaining digitalized copies of the said documents.

ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಕಲಂ 77ರ ಪ್ರಕಾರ ಸಾರ್ವಜನಿಕ ದಸ್ತಾವೇಜುಗಳ ಒಳಾಂಶಗಳನ್ನು ________ ಸಾಬೀತು ಪಡಿಸಬಹುದು:
ಎ) ಸಂಬಂಧಪಟ್ಟ ಸಾರ್ವಜನಿಕ ಅಧಿಕಾರಿಯನ್ನು ಸಾಕ್ಷಿ ವಿಚಾರಣೆ ಮಾಡಿ
ಬಿ) ಸಂಬಂಧಪಟ್ಟ ದಾಖಲಾತಿಯ ಪ್ರಮಾಣಿತ ಪ್ರತಿಗಳನ್ನು ಹಾಜರು ಪಡಿಸಿ
ಸಿ) ಮೂಲ ಸಾರ್ವಜನಿಕ ದಸ್ತಾವೇಜನ್ನು ಪಡೆದುಕೊಳ್ಳುವ ಮೂಲಕ
ಡಿ) ಆ ದಾಖಲಾತಿಗಳ ಡಿಜಿಟಲ್ ಪ್ರತಿಗಳನ್ನು ಪಡೆಯುವ ಮೂಲಕ



Teachingninja.in

83 Inherent powers under Section 482 of the Code of Criminal Procedure, 1973 can be exercised by ________

A) only the Supreme Court.
B) only the High Courts.
C) only the Sessions Courts.
D) Any Court.

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 482ರ ಅಡಿಯಲ್ಲಿನ ಅಂತರ್ನಿಹಿತ ಅಧಿಕಾರಗಳನ್ನು ಚಲಾಯಿಸಬಹುದಾಗಿದ್ದು ________

ಎ) ಸರ್ವೋಚ್ಚ ನ್ಯಾಯಾಲಯ ಮಾತ್ರ
ಬಿ) ಉಚ್ಚ ನ್ಯಾಯಾಲಯಗಳು ಮಾತ್ರ
ಸಿ) ಸತ್ರ ನ್ಯಾಯಾಲಯಗಳು ಮಾತ್ರ
ಡಿ) ಯಾವುದೇ ನ್ಯಾಯಾಲಯ

84 Maintenance of case dairy by an Investigating Officer is mandatory under ________of Code of Criminal Procedure, 1973.

A) Section 175
B) Section 174
C) Section 173
D) Section 172

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ________ ಅಡಿಯಲ್ಲಿ ತನಿಖಾಧಿಕಾರಿಯವರು ಕಲಾಪಗಳ ದಿನಚರಿಯನ್ನು ನಿರ್ವಹಣೆ ಮಾಡುವುದು ಕಡ್ಡಾಯವಾಗಿರುತ್ತದೆ.

ಎ) ಕಲಂ 175
ಬಿ) ಕಲಂ 174
ಸಿ) ಕಲಂ 173
ಡಿ) ಕಲಂ 172

85 Under Order 26 Rules 10A, 10B and 10C of the Code of Civil Procedure, 1908, for one of the following purposes Commission can not be issued:

A) For scientific investigation
B) To ascertain as to who is in possession of immovable property.
C) For performance of a ministerial act.
D) For the sale of movable property.

ದಿವಾಣಿ ಪ್ರಕ್ರಿಯಾ ಸಂಹಿತೆ, 1908 ಕ್ರಮಾದೇಶ 26 ನಿಯಮ 10ಎ, 10ಬಿ ಮತ್ತು 10ಸಿ ಅಡಿಯಲ್ಲಿ ಈ ಕೆಳಗಿನ ಪೈಕಿ ಒಂದು ಉದ್ದೇಶಕ್ಕೆ ಕಮಿಷನನ್ನು ಹೊರಡಿಸಲು ಆಗುವುದಿಲ್ಲ:

ಎ) ವೈಜ್ಞಾನಿಕ ತನಿಖೆಗಾಗಿ
ಬಿ) ಸ್ಥಿರಾಸ್ತಿಯ ಸ್ವಾಧೀನದಲ್ಲಿ ಯಾರಿದ್ದಾರೆ ಎಂದು ತಿಳಿದುಕೊಳ್ಳಲು
ಸಿ) ಲಿಪಿಕ ಕಾರ್ಯದ ನಿರ್ವಹಣೆಗಾಗಿ
ಡಿ) ಚರಾಸ್ತಿಯ ಮಾರಾಟಕ್ಕಾಗಿ



Teachingninja.in

86 As per Section 201 of Code of Criminal Procedure, 1973, if a written complaint is made to a Magistrate, who is not competent to take cognizance of the offence, he shall _________

A) reject the said complaint.

B) transfer the said complaint to the proper Court.

C) return the said complaint for presentation to the proper Court with an endorsement to that effect.

D) dismiss the said complaint.

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 201ರ ಪ್ರಕಾರ ಅಪರಾಧದ ಸಂಜ್ಞೇಯನ್ನು ತೆಗೆದುಕೊಳ್ಳಲು ಸಕ್ಷಮನಲ್ಲದ ದಂಡಾಧಿಕಾರಿಗೆ ಲಿಖಿತ ರೂಪದಲ್ಲಿ ಫಿರ್ಯಾದಿಯನ್ನು ಕೊಟ್ಟಲ್ಲಿ ಅವರು _________

ಎ) ಆ ಫಿರ್ಯಾದಿಯನ್ನು ತಿರಸ್ಕರಿಸತಕ್ಕದ್ದು

ಬಿ) ಆ ಫಿರ್ಯಾದಿಯನ್ನು ಯಕ್ತ ನ್ಯಾಯಾಲಯಕ್ಕೆ ವರ್ಗಾಯಿಸತಕ್ಕದ್ದು

ಸಿ) ಆ ಫಿರ್ಯಾದಿಯನ್ನು ಯುಕ್ತ ನ್ಯಾಯಾಲಯಕ್ಕೆ ಹಾಜರು ಪಡಿಸಬೇಕೆಂಬ ಹಿಂಬರಹದೊಂದಿಗೆ ಹಿಂತಿರುಗಿಸತಕ್ಕದ್ದು

ಡಿ) ಆ ಫಿರ್ಯಾದಿಯನ್ನು ವಜಾ ಮಾಡತಕ್ಕದ್ದು.

87 Which team has won the title of this year's (2022) Indian Premier League (IPL)?

A) Lucknow Super Giants.

B) Rajasthan Royals

C) Royal Challengers Bengaluru.

D) Gujarath Titans

ಈ ವರ್ಷದ (2022) ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್)ನ ಪ್ರಶಸ್ತಿಯನ್ನು ವಿಜೇತ ತಂಡ ಯಾವುದು?

ಎ) ಲಕ್ನೊ ಸೂಪರ್ ಜೈಂಟ್ಸ್

ಬಿ) ರಾಜಸ್ಥಾನ ರಾಯಲ್ಸ್

ಸಿ) ರಾಯಲ್ ಚಾಲೆಂಜರ್ಸ್ ಬೆಂಗಳೂರು

ಡಿ) ಗುಜರಾತ್ ಟೈಟನ್ಸ್

88 As per Section 38 of the Code of Civil Procedure, 1908, which Court is competent to execute the decree?

A) only the Court which passed the decree.

B) only the Court to which decree is sent for execution

C) any Court

D) either A) or B)

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕಲಂ 38ರ ಪ್ರಕಾರ ಯಾವ ನ್ಯಾಯಾಲಯವು ಡಿಕ್ರಿಯನ್ನು ಅಮಲ್ಜಾರಿಗೊಳಿಸಲು ಸಕ್ಷಮವಾಗಿದೆ?

ಎ) ಡಿಕ್ರಿಯನ್ನು ಮಾಡಿದ ನ್ಯಾಯಾಲಯ ಮಾತ್ರ

ಬಿ) ಡಿಕ್ರಿಯನ್ನು ಅಮಲ್ಜಾರಿಗೊಳಿಸಲು ಕಳುಹಿಸಿಲ್ಪಟ್ಟ ನ್ಯಾಯಾಲಯ ಮಾತ್ರ

ಸಿ) ಯಾವುದೇ ನ್ಯಾಯಾಲಯ

ಡಿ) ಎ) ಅಥವಾ ಬಿ)



Teachingninja.in

89 Section 112 of the Indian Evidence Act, 1872 can be invoked when there is dispute regarding:
A) Paternity of a child
B) Maternity of a child
C) Both (A) and (B)
D) Either (A) or (B)

ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಕಲಂ 112ನ್ನು ____________ ಬಗ್ಗೆ ತಕರಾರು ಇದ್ದಾಗ ಉಲ್ಲೇಖಿಸಬಹುದು:
ಎ) ಮಗುವಿನ ಪಿತೃತ್ವ
ಬಿ) ಮಗುವಿನ ಮಾತೃತ್ವ
ಸಿ) (ಎ) ಮತ್ತು (ಬಿ) ಎರಡೂ
ಡಿ) (ಎ) ಅಥವಾ (ಬಿ)

90 Under the Constitution of India, power to issue Writ of Habeas Corpus vested in:
A) only the High Courts.
B) only the Supreme Court.
C) Both the Supreme Court and the High Courts.
D) All the Courts down to District Courts

ಭಾರತದ ಸಂವಿಧಾನದ ಅಡಿಯಲ್ಲಿ, ಹೇಬಿಯಸ್ ಕಾರ್ಪೋಸ್ ರಿಟ್‌ನ್ನು ಹೊರಡಿಸುವ ಅಧಿಕಾರವಿರುವುದು:
ಎ) ಉಚ್ಚ ನ್ಯಾಯಾಲಯಗಳಿಗೆ ಮಾತ್ರ
ಬಿ) ಸರ್ವೋಚ್ಚ ನ್ಯಾಯಾಲಯಕ್ಕೆ ಮಾತ್ರ
ಸಿ) ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳು ಎರಡೂ
ಡಿ) ಜಿಲ್ಲಾ ನ್ಯಾಯಾಲಯದವರೆಗಿನ ಎಲ್ಲಾ ನ್ಯಾಯಾಲಯಗಳಿಗೆ

91 Who is the founder of Facebook?
A) Mark Zuckerberg.
B) Bill Gates.
C) Charles Bubbage.
D) Lawrence Ellison.

ಫೇಸ್‌ಬುಕ್‌ನ ಸ್ಥಾಪಕ ಯಾರು?
ಎ) ಮಾರ್ಕ್ ಜೂಕರ್‌ಬರ್ಗ್
ಬಿ) ಬಿಲ್ ಗೇಟ್ಸ್
ಸಿ) ಚಾರ್ಲಸ್ ಬಬೇಜ್
ಡಿ) ಲಾರೆನ್ಸ್ ಎಲಿಸನ್

92 Disclosing the identity of the rape victim is punishable under________
A) Section 354D of Indian Penal Code.
B) Section 228A of Indian Penal Code.
C) Section 376E of Indian Penal Code.
D) Section 509 of Indian Penal Code.



Teachingninja.in

ಅತ್ಯಾಚಾರಕ್ಕೆ ಒಳಗಾದ ನೊಂದ ವ್ಯಕ್ತಿಯ ಗುರುತನ್ನು ಬಹಿರಂಗಪಡಿಸುವುದು ________ ಅಡಿಯಲ್ಲಿ ಶಿಕ್ಷಾರ್ಹವಾಗಿದೆ.
ಎ) ಭಾರತೀಯ ದಂಡ ಸಂಹಿತೆಯ ಕಲಂ 254ಡಿ
ಬಿ) ಭಾರತೀಯ ದಂಡ ಸಂಹಿತೆಯ ಕಲಂ 228ಎ
ಸಿ) ಭಾರತೀಯ ದಂಡ ಸಂಹಿತೆಯ ಕಲಂ 376ಇ
ಡಿ) ಭಾರತೀಯ ದಂಡ ಸಂಹಿತೆಯ ಕಲಂ 509

93 Which High Court in India is having territorial jurisdiction over 'Lakshadweep' Island?
A) Bombay High Court
B) Kerala High Court
C) Karnataka High Court.
D) Orissa High Court

'ಲಕ್ಷದ್ವೀಪ್' ದ್ವೀಪ ಪ್ರದೇಶದ ಪ್ರಾದೇಶಿಕ ನ್ಯಾಯವ್ಯಾಪ್ತಿಯು ಭಾರತದ ಯಾವ ಉಚ್ಚ ನ್ಯಾಯಾಲಯಕ್ಕೆ ಇರುತ್ತದೆ?
ಎ) ಬಾಂಬೆ ಉಚ್ಚ ನ್ಯಾಯಾಲಯ
ಬಿ) ಕೇರಳ ಉಚ್ಚ ನ್ಯಾಯಾಲಯ
ಸಿ) ಕರ್ನಾಟಕ ಉಚ್ಚ ನ್ಯಾಯಾಲಯ
ಡಿ) ಒರಿಸ್ಸಾ ಉಚ್ಚ ನ್ಯಾಯಾಲಯ

94 When two persons mutually transfer the ownership of one thing for the ownership of another, neither thing or both things being money only, the transaction is called:
A) lease
B) sale
C) gift
D) an exchange

ಇಬ್ಬರು ವ್ಯಕ್ತಿಗಳು ಒಂದು ವಸ್ತುವಿನ ಒಡೆತನವನ್ನು ಬೇರೊಂದು ವಸ್ತುವಿನ ಒಡೆತನಕ್ಕಾಗಿ ಪರಸ್ಪರವಾಗಿ ವರ್ಗಾಯಿಸಿಕೊಂಡಾಗ, ಆ ಎರಡೂ ವಸ್ತುಗಳ ಪೈಕಿ ಯಾವುದೊಂದು ಹಣವಾಗದೆ ಇರುವಲ್ಲಿ ಅಥವಾ ಅವು ಎರಡೂ ವಸ್ತುಗಳು ಕೇವಲ ಹಣವಾಗಿರುವಲ್ಲಿ, ಆ ವ್ಯವಹಾರವನ್ನು ________ ಎಂದು ಕರೆಯುತ್ತಾರೆ.
ಎ) ಗೇಣಿ
ಬಿ) ಮಾರಾಟ
ಸಿ) ದಾನ
ಡಿ) ವಿನಿಮಯ

95 The First Woman Advocate to be directly elevated from the Bar as a Judge of the Karnataka High Court is ____________
A) Smt. Manjula Chellur.
B) Smt. B.V.Nagarathna
C) Smt. B.S.Indrakala
D) Smt. S.Sujatha.



Teachingninja.in

ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಯಾಗಿ ವಕೀಲ ವೃಂದದಿಂದ ನೇರವಾಗಿ ನೇಮಕಗೊಂಡ ಪ್ರಥಮ ಮಹಿಳಾ ನ್ಯಾಯವಾದಿ ________
ಎ) ಶ್ರೀಮತಿ ಮಂಜುಳಾ ಚೆಲ್ಲೂರ್
ಬಿ) ಶ್ರೀಮತಿ ಬಿ.ವಿ.ನಾಗರತ್ನ
ಸಿ) ಶ್ರೀಮತಿ ಬಿ.ಎಸ್.ಇಂದ್ರಕಲಾ
ಡಿ) ಶ್ರೀಮತಿ ಎಸ್.ಸುಜಾತ

96 "As per the Negotiable Instruments Act, 1881, "evidence of the complainant may be given by him on affidavit". Above statement is ________
A) incorrect
B) correct
C) partially correct
D) none of the above

"ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881ರ ಪ್ರಕಾರ ಫಿರ್ಯಾದಿಯ ಸಾಕ್ಷ್ಯವನ್ನು ಪ್ರಮಾಣಪತ್ರದ ಮುಖಾಂತರ ನೀಡಬಹುದು". ಮೇಲಿನ ಹೇಳಿಕೆಯು ________
ಎ) ಸರಿಯಲ್ಲ
ಬಿ) ಸರಿ
ಸಿ) ಭಾಗಶಃ ಸರಿ
ಡಿ) ಮೇಲಿನ ಯಾವುದು ಅಲ್ಲ

97 Committing theft in dwelling house is punishable under ______of the Indian Penal Code.
A) Section 378
B) Section 379
C) Section 380
D) Section 381

ವಾಸದ ಮನೆಯಲ್ಲಿ ಕಳವು ಮಾಡುವುದು ಭಾರತೀಯ ದಂಡ ಸಂಹಿತೆಯ ________ನಡಿಯಲ್ಲಿ ಶಿಕ್ಷಾರ್ಹವಾಗಿದೆ.
ಎ) ಕಲಂ 378
ಬಿ) ಕಲಂ 379
ಸಿ) ಕಲಂ 380
ಡಿ) ಕಲಂ 381

98 Landmark judgment of Supreme Court of India in "M Siddiq (Deceased) through legal representatives vs Mahant Suresh Das and others" is called as:
A) triple talaq judgment.
B) Shabarimala judgment.
C) Ayodhya judgment
D) Hijab judgment.



Teachingninja.in

"ಎಂ ಸಿದ್ದಿಕ್ಕಿ (ಮೃತ) ಅವರ ಕಾನೂನು ಬದ್ಧ ಪ್ರತಿನಿದಿಗಳು ವಿರುದ್ಧ ಮಹಂತ್ ಸುರೇಶ್ ದಾಸ್ ಮತ್ತು ಇತರರು" ಪ್ರಕರಣದಲ್ಲಿನ ಭಾರತದ ಸರ್ವೋಚ್ಚ ನ್ಯಾಯಾಲಯದ ಗುರುತರವಾದ ತೀರ್ಪನ್ನು ________ ಎಂದು ಕರೆಯುತ್ತಾರೆ.
ಎ) ತ್ರಿವಳಿ ತಲಾಖ್ ತೀರ್ಪು
ಬಿ) ಶಬರಿಮಲೆ ತೀರ್ಪು
ಸಿ) ಅಯೋಧ್ಯ ತೀರ್ಪು
ಡಿ) ಹಿಜಾಬ್ ತೀರ್ಪು

99 One who believes in God is called as __________
A) Atheist.
B) Theist.
C) Optimist.
D) Heretic.

ದೇವರನ್ನು ನಂಬುವವರನ್ನು __________ ಎಂದು ಕರೆಯುತ್ತಾರೆ.
ಎ) ನಾಸ್ತಿಕ
ಬಿ) ಆಸ್ತಿಕ
ಸಿ) ಆಶಾವಾದಿ
ಡಿ) ಪಾಷಂಡಿ

100 "A lease of immovable property from year to year, or for any term exceeding one year or reserving a yearly rent, shall be made only by a unregistered instrument" As per the Transfer of Property Act, 1882 above statement is:
A) incorrect
B) correct
C) either A) or B)
D) none of the above.

"ವರ್ಷದಿಂದ ವರ್ಷಕ್ಕೆ ಅಥವಾ ಒಂದು ವರ್ಷಕ್ಕೆ ಮೀರುವ ಯಾವುದೇ ಅವಧಿಗಾಗಿ ಅಥವಾ ವಾರ್ಷಿಕ ಬಾಡಿಗೆಯನ್ನು ಮೀಸಲಿರಿಸುವ ಸ್ಥಿರ ಸ್ವತ್ತಿನ ಗೇಣಿಯನ್ನು ನೊಂದಾಯಿತವಲ್ಲದ ದಸ್ತಾವೇಜಿನ ಮೂಲಕವೇ ಮಾಡತಕ್ಕದ್ದು" ಸ್ವತ್ತು ವರ್ಗಾವಣೆ ಅಧಿನಿಯಮ, 1882ರ ಪ್ರಕಾರ ಈ ಮೇಲಿನ ಹೇಳಿಕೆಯು:
ಎ) ಸರಿಯಲ್ಲ
ಬಿ) ಸರಿ
ಸಿ) ಎ) ಅಥವಾ ಬಿ)
ಡಿ) ಮೇಲಿನ ಯಾವುದು ಅಲ್ಲ

-------------



teachingninja.in
Teachingninja.in